

# ಪರಿವರ್ತನೆ

ಆಶಿಷ್ ರಾಯ್‌ಚೂರ್

ಮುದ್ರಣ ಮತ್ತು ವಿತರಣೆ: **ಆಲ್ ಪೀಪಲ್ಸ್ ಚರ್ಚ್ ಮತ್ತು ವರ್ಲ್ಡ್ ಔಟ್‌ರೀಚ್, ಬೆಂಗಳೂರು**
ಪ್ರಥಮ ಪ್ರತಿ ಮುದ್ರಣ: ಜೂನ್ 2017

ಪುನರ್ ಪರಿಶೀಲಿಸಿದವರು: ರವಿಕುಮಾರ್ ಎಂ.
ಮುಖಪುಟ ಮತ್ತು ವರ್ಣವಿನ್ಯಾಸ: ಕರುಣಾ ಜೆರೋಮ್, ಬೈಫೈಯ್ಥ್ ಡಿಸೈನ್ಸ್

**Contact Information:**
All Peoples Church & World Outreach,
# 319, 2nd Floor, 7th Main, HRBR Layout,
2nd Block, Kalyan Nagar, Bangalore 560 043
Karnataka, INDIA

Phone: +91-80-25452617, +91-80-65970617
Email: contact@apcwo.org
Website: www.apcwo.org

Unless otherwise indicated, all Scripture quotations are taken from the Holy Bible, New King James Version.

**ಉಚಿತ ವಿತರಣೆಗಾಗಿ**

ಈ ಪುಸ್ತಕದ ಉಚಿತ ವಿತರಣೆಯು ಆಲ್ ಪೀಪಲ್ಸ್ ಸಭೆಯ ಸಭಿಕರು, ಸ್ನೇಹಿತರು, ಪಾಲುಗಾರರ ಹಣಕಾಸಿನ ನೆರವಿನ ಮೂಲಕ ಸಾಧ್ಯವಾಗಿದೆ. ಇಂತಹ ಉಚಿತ ಪುಸ್ತಕ ಪ್ರಕಾಶನದ ಮೂಲಕ ನೀವು ಸಮೃದ್ಧಿ ಹೊಂದಿದ್ದರೆ ಆಲ್ ಪೀಪಲ್ಸ್ ಸಭೆಯ ಪ್ರಕಾಶನಗಳ ಉಚಿತ ವಿತರಣೆ ಮತ್ತು ಮುದ್ರಣಗಳಿಗೆ ಹಣಕಾಸಿನ ಸಹಾಯ ನೀಡುವಂತೆ ನಿಮ್ಮನ್ನು ಆಹ್ವಾನಿಸುತ್ತೇವೆ. ವಂದನೆಗಳು!

(Kannada Book - Change)

# ಪ–ರಿ–ವ–ರ್ತ–ನೆ

# ವಿಷಯಸೂಚಿ

1. ಪರಿವರ್ತನೆ ಒಂದು ಅಗತ್ಯ ಕಾರ್ಯಗತಿ 1

2. ನಮ್ಮ ಉದ್ದೇಶ ಮತ್ತು ಅಪೇಕ್ಷೆಗಳಲ್ಲಿ ಪರಿವರ್ತನೆ 5

3. ನಮ್ಮ ಯೋಚನೆ, ಮನೋಭಾವನೆ, ನುಡಿ ಮತ್ತು ನಡತೆಗಳಲ್ಲಿ ಪರಿವರ್ತನೆ 8

4. ಅನಿರೀಕ್ಷಿತ ಪರಿವರ್ತನೆಗಳಿಗೆ ತೆರೆದಿರುವುದು 11

5. ಪರಿವರ್ತನೆ - ಪ್ರಗತಿ ಮತ್ತು ವೃದ್ಧಿಗೆ ಅಗತ್ಯ 14

6. ಪರಿವರ್ತನೆಯ ಆತ್ಮನು 15

# 1

# ಪರಿವರ್ತನೆ ಒಂದು ಅಗತ್ಯ ಕಾರ್ಯಗತಿ

ಪರಿವರ್ತನೆ! ನಮ್ಮ ಸುತ್ತಲೂ ವಿಷಯಗಳು ಎಡೆಬಿಡದೆ ಪರಿವರ್ತನೆಯಾಗುತ್ತವೆ. ನಾವು ಪ್ರಪಂಚದಾದ್ಯಂತ ಸಾಮಾಜಿಕ, ರಾಜಕೀಯ, ಆರ್ಥಿಕ ಮತ್ತಿತರ ಹಲವಾರು ಪರಿವರ್ತನೆಗಳಾಗುವುದನ್ನು ನೋಡುತ್ತೇವೆ. ವಿಷಯಗಳು ಯಾವಾಗಲೂ ಇದ್ದಂತೆಯೇ ಇರುವುದಿಲ್ಲ. ''ಇಂದು ಪ್ರಪಂಚದಲ್ಲಿ ಒಂದು ವಿಷಯವು ಸ್ಥಿರವಾಗಿದೆ, ಅದು ಪರಿವರ್ತನೆ!'' ಎಂಬುದು ಸಾಮಾನ್ಯ ನಾಣ್ಣುಡಿ. 'ಪರಿವರ್ತನೆ' ಎಂಬ ಪದವು ವಿಷಯಗಳು ಈಗ ಇರುವುದಕ್ಕಿಂತ ಭಿನ್ನವಾಗಲು ಕಾರಣವಾಗುವ ಒಂದು ಘಟನೆಯನ್ನು ಅಥವಾ ಕಾರ್ಯಗತಿಯನ್ನು ಸೂಚಿಸುತ್ತದೆ.

ಒಬ್ಬ ಕ್ರೈಸ್ತನಿಗೆ ಕೂಡ ಪರಿವರ್ತನೆಯು ಮುಖ್ಯವಾಗಿದೆ! ನಮ್ಮ ಕ್ರೈಸ್ತ ಜೀವನವು ಪಾಪ ಮತ್ತು ಸೈತಾನನಿಂದ ಜೀವಸ್ವರೂಪನಾದ ದೇವರ ಕಡೆಗೆ ಹೃದಯ ಮತ್ತು ಮನಸ್ಸಿನ ಪರಿವರ್ತನೆಯಾಗುವ ಅವಶ್ಯಕ ಅಂಶವಾಗಿರುವ ಪಶ್ಚಾತ್ತಾಪದಿಂದ ಪ್ರಾರಂಭವಾಯಿತು. ಆ ಕ್ಷಣದಲ್ಲಿಯೇ ದೇವರು ನಮ್ಮನ್ನು ಆಂತರ್ಯದಲ್ಲಿ ಪರಿವರ್ತನೆ ಮಾಡಿದನು. ನಾವು ಹೊಸದಾಗಿ ಹುಟ್ಟಿದೆವು! ನಾವು ಕ್ರಿಸ್ತನಲ್ಲಿ ನೂತನ ಸೃಷ್ಟಿಯಾದೆವು. ಒಂದು ಕ್ಷಣದಲ್ಲಿ, ದೇವರು ನಮ್ಮ ಆತ್ಮಗಳಲ್ಲಿ ನಮ್ಮನ್ನು ಕತ್ತಲೆಯಿಂದ ಬೆಳಕಿಗೂ, ಸೈತಾನನ ಬಂಧನದಿಂದ ಕ್ರಿಸ್ತನಲ್ಲಿ ಸ್ವಾತಂತ್ರ್ಯಕ್ಕೂ ತಂದ ಒಂದು ಸೃಷ್ಟಿಯ ಕಾರ್ಯವನ್ನು ಮಾಡಿದನು. ಕ್ರೈಸ್ತ ಜೀವನವು ಸತತವಾಗಿ ಪರಿವರ್ತನೆಯಾಗುತ್ತ ಮುಂದುವರಿಯುವ ಒಂದು ಕಾರ್ಯಗತಿಯಾಗಿದೆ. ದೇವರು ನಮ್ಮನ್ನು ''ತನ್ನ ಮಗನ ಸಾರೂಪ್ಯವುಳ್ಳವರಾಗುವುದಕ್ಕೆ'' ಮೊದಲೇ ನೇಮಿಸಿದನು (ರೋಮಾಪುರದವರಿಗೆ 8:29). ಸತತವಾಗಿ ಮುಂದುವರಿಯುವ ಪರಿವರ್ತನೆಯ ಒಂದು ಕಾರ್ಯಗತಿಯಿಂದಾಗಿ ನಾವು ಈಗ ಇರುವ ರೀತಿಯಿಂದ ಸಂಪೂರ್ಣವಾಗಿ ಕ್ರಿಸ್ತನ ಸಾರೂಪ್ಯವುಳ್ಳ ವ್ಯಕ್ತಿಗಳಾಗುವೆವು. ''ಕರ್ತನಾದ ಯೇಸು ತಾನೇ ಕಡೇ ತುತ್ತೂರಿಯ ಧ್ವನಿಯೊಂದಿಗೆ ಪ್ರತ್ಯಕ್ಷನಾಗುವಾಗ ನಾವೆಲ್ಲರೂ ಒಂದು ಕ್ಷಣದಲ್ಲೇ ರೆಪ್ಪೆ ಬಡಿಯುವಷ್ಟರೊಳಗಾಗಿ ಮಾರ್ಪಡುವ'' ಪರಿವರ್ತನೆಯ ಆ ಮಹಾದಿನವನ್ನು

ನಾವೆಲ್ಲರೂ ಎದುರು ನೋಡುತ್ತಿದ್ದೇವೆ (1 ಕೊರಿಂಥದವರಿಗೆ 15:51, 52). ಮರಣಾಧೀನರಾಗಿರುವವರು ಅಮರತ್ವವನ್ನು ಧರಿಸುವರು. ''ಕ್ರಿಸ್ತನು ಪ್ರತ್ಯಕ್ಷನಾದರೆ ನಾವು ಆತನ ಹಾಗಿರುವೆವೆಂದು ಬಲ್ಲೆವು; (1 ಯೋಹಾನ 3:2).

ಕ್ರಿಸ್ತನಲ್ಲಿಯ ನಮ್ಮ ಜೀವನವು ಒಂದು ಕ್ಷಣದ ಪರಿವರ್ತನೆಯಲ್ಲಿ ಪ್ರಾರಂಭವಾಗಿ ಇನ್ನೊಂದು ಕ್ಷಣದ ಪರಿವರ್ತನೆಯ ಘಟನೆಯಲ್ಲಿ ತುತ್ತ ತುದಿಗೇರುತ್ತದೆ. ಆದಾಗ್ಯೂ ಇವೆರಡರ ಮಧ್ಯದಲ್ಲಿ ಪರಿವರ್ತನೆಯು ಮುಂದುವರಿಯುತ್ತಿರುವ ಒಂದು ಕಾರ್ಯಗತಿಯಿದೆ. ಸತತವಾಗಿ ಮುಂದುವರಿಯುವ ಪರಿವರ್ತನೆಯ ಈ ಕಾರ್ಯಗತಿಯಲ್ಲಿ ನಾವು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮೊಟ್ಟ ಮೊದಲು ನಮ್ಮನ್ನು ಪ್ರೇರಿಸಿ ಮೇಲೆಬ್ಬಿಸುವ ಉದ್ದೇಶದಿಂದ ಆ ವಿಷಯವನ್ನು ಈ ಪುಸ್ತಕವು ಹೇಳುತ್ತದೆ. ನಮ್ಮ ಜೀವನಗಳಲ್ಲಿ ನಾವು ಆ ಪರಿವರ್ತನೆಯ ಕಾರ್ಯಗತಿಗೊಳಪಡಿಸಲು ಅಗತ್ಯವಿರುವ ಕ್ಷೇತ್ರಗಳನ್ನು ಕೂಡ ನೋಡುವೆವು.

**ನಾವೆಲ್ಲರೂ ಮುಸುಕು ತೆಗೆದಿರುವ ಮುಖದಿಂದ ಕರ್ತನ ಪ್ರಭಾವವನ್ನು ದರ್ಪಣದಲ್ಲಿ ಕಾಣಿಸುತ್ತದೋ ಎಂಬಂತೆ ದೃಷ್ಟಿಸುವವರಾಗಿದ್ದು ಪ್ರಭಾವದಿಂದ ಅಧಿಕ ಪ್ರಭಾವಕ್ಕೆ ಹೋಗುತ್ತಾ ಆ ಪ್ರಭಾವದ ಸಾರೂಪ್ಯವುಳ್ಳವರೇ ಆಗುತ್ತೇವೆ; ಇದು ದೇವರಾತ್ಮನಾಗಿರುವ ಕರ್ತನ ಕೆಲಸಕ್ಕನುಸಾರವಾದದ್ದೇ''** (2 ಕೊರಿಂಥದವರಿಗೆ 3:18).

ನಮ್ಮ ದೃಷ್ಟಿಯು ಕರ್ತನ ಮೇಲಿದ್ದರೆ, ನಾವು ಆತನ ಸಾರೂಪ್ಯಕ್ಕೆ ಪರಿವರ್ತನೆಯಾಗುವುದು ಅನಿವಾರ್ಯ ಪರಿಣಾಮವಾಗಿದೆ. ನಿಜವೆಂದರೆ, ನಾವು ಹೆಚ್ಚು ಆತನ ಸಮೀಪ ಹೋಗಿ ಆತನ ಮಹಿಮೆಯನ್ನು ದೃಷ್ಟಿಸಿದಂತೆ, ಪರಿವರ್ತನೆಯಾಗಬೇಕಾದ ನಮ್ಮ ಜೀವನಗಳ ಹೆಚ್ಚು ಕ್ಷೇತ್ರಗಳನ್ನು ಗುರುತಿಸಲು ಪ್ರಾರಂಭಿಸುವೆವು.

ಮೇಲಿನ ವಚನವು ''ಹೋಗುತ್ತಾ ಸಾರೂಪ್ಯವುಳ್ಳವರೇ ಆಗುತ್ತೇವೆ'' ಎಂದು ಹೇಳುತ್ತದೆ (ಇಲ್ಲಿ ಮುಂದುವರಿಯುತ್ತಾ ಇರುವ ಕಾರ್ಯಗತಿಯನ್ನು ಗಮನಿಸಿರಿ). ನಾವು ಪರಿವರ್ತನೆಗೊಳ್ಳುತ್ತಿರುವಾಗ ಪ್ರಭಾವದಿಂದ ಪ್ರಭಾವಕ್ಕೆ ಮುಂದುವರಿಯುತ್ತಿರುತ್ತೇವೆ. ಆದುದರಿಂದ ಒಂದು ಕ್ಷೇತ್ರದಿಂದ ಮುಂದಿನ ಕ್ಷೇತ್ರಕ್ಕೆ ಹೋಗಲು ಪರಿವರ್ತನೆಯು ಒಂದು ಅಗತ್ಯ ಕಾರ್ಯಗತಿಯಾಗಿದೆ. ಇದು ಆತ್ಮಿಕ

ಬೆಳವಣಿಗೆ ಅಥವಾ ಪ್ರಗತಿಯನ್ನುಂಟುಮಾಡುತ್ತದೆ. ಪರಿವರ್ತನೆಯಿಲ್ಲದೆ ಆತ್ಮಿಕ ಬೆಳವಣಿಗೆಯಿರಲಾರದು, ಏಕೆಂದರೆ ಬೆಳವಣಿಗೆಯೇ ಪರಿವರ್ತನೆಯ ಒಂದು ಕಾರ್ಯಗತಿಯಾಗಿದೆ. ದೇವರ ಮಕ್ಕಳಲ್ಲಿ ಒಬ್ಬನಾದರೂ ದೀರ್ಘಕಾಲ ಅದೇ ಆತ್ಮಿಕ ಸ್ಥಿತಿಯಲ್ಲಿರುವುದು ದೇವರ ಅಪೇಕ್ಷೆಯಲ್ಲ ಎಂದು ನಾವು ನಂಬುತ್ತೇವೆ. ನಾವು ಮುನ್ನಡೆಯುತ್ತಿರಬೇಕೆಂಬುದು ಆತನ ಅಪೇಕ್ಷೆಯಾಗಿದೆ. ದೇವರಿಗೆ ನಾವು ಮುಂದುವರಿಯದೆ ನಿಂತುಬಿಡುವುದು ಬೇಡ.

ನಮ್ಮ ಆತ್ಮಿಕ ಜೀವನಗಳಲ್ಲಿ ಪರಿವರ್ತನೆ ಅಗತ್ಯವಿರುವುದಲ್ಲದೆ, ನಮ್ಮ ದಿನನಿತ್ಯದ ಜೀವನದ ಪ್ರತಿಯೊಂದು ಕ್ಷೇತ್ರದಲ್ಲೂ ಅದು ಬೇಕು. ನಮ್ಮ ವ್ಯಕ್ತಿತ್ವ, ವರ್ತನೆ, ಬುದ್ಧಿಶಕ್ತಿ, ಕೌಶಲ್ಯ, ಸಾಮರ್ಥ್ಯ, ಹಣಕಾಸು, ಯೋಜನೆ, ಗುರಿ ಮತ್ತಿತರ ವಿಷಯಗಳಲ್ಲಿ ಪರಿವರ್ತನೆಯನ್ನು ಸ್ವಾಗತಿಸಬೇಕು. ನಮ್ಮ ಜೀವನದ ಪ್ರತಿಯೊಂದು ಕ್ಷೇತ್ರದಲ್ಲೂ ‘‘ಪ್ರಭಾವದಿಂದ ಅಧಿಕ ಪ್ರಭಾವಕ್ಕೆ ಮುಂದುವರಿಯಲು ಒಂದು ನಿರ್ಧಾರದ ಮತ್ತು ಬುದ್ಧಿವಂತಿಕೆಯ ಪ್ರಯತ್ನವಿರಬೇಕು. ಈ ಭೂಮಿಯ ಮೇಲಿನ ನಮ್ಮ ಜೀವನದ ಪ್ರತಿಯೊಂದು ವಿವರದ ಮೇಲೂ ವಿದ್ಯೆ, ಜೀವನೋಪಾಯ, ಕುಟುಂಬ, ಉದ್ಯೋಗ ಮತ್ತು ಸೇವೆಯ ಮೇಲೂ - ದೇವರಿಗೆ ಆಸಕ್ತಿಯಿದೆ. ಈ ಪ್ರತಿಯೊಂದು ಕ್ಷೇತ್ರದಲ್ಲೂ ನಾವು ಸಾಧಿಸಬಹುದಾದ ಮೇಲ್ಮಟ್ಟದ ಮತ್ತು ಉತ್ತಮ ವಿಷಯಗಳು ಯಾವಾಗಲೂ ಇವೆ.

ನಿದರ್ಶನವಾಗಿ, ನೀವು ಒಬ್ಬ ಯಶಸ್ವಿ ವೈದ್ಯರಾಗಿದ್ದರೆ, ಉತ್ತಮ ವೈದ್ಯರಾಗಲು ಪ್ರಯಾಸ ಪಡಬಹುದು. ಪ್ರಾಯಶಃ ಔಷಧ ಅಥವಾ ಚಿಕಿತ್ಸೆ ದೊರಕಿಸಿಕೊಳ್ಳಲಾಗದವರಿಗೆ ಅವುಗಳನ್ನು ಒದಗಿಸುವ ಹೊಸ ವಿಧಾನಗಳನ್ನು ನೀವು ಯೋಚಿಸಬಹುದು. ಮೊದಲು ನಿಮ್ಮ ಯೋಜನೆಯಲ್ಲಿರದಿದ್ದ ವಿಷಯಗಳನ್ನು ಮಾಡಲು ನೀವು ಯೋಚಿಸಬಹುದು. ವಿದ್ಯಾರ್ಥಿಯಾಗಿದ್ದರೆ ತಿಳುವಳಿಕೆ ಹೆಚ್ಚಿಸಲು ಅಥವಾ ಉತ್ತಮ ಸಾಧನೆ ಮಾಡಲು ಪ್ರಯತ್ನಿಸಬಹುದು. ಒಬ್ಬ ಸೇವಕನಾಗಿ ನೀವು ಪ್ರಸಂಗಿಸುವ ಕಲೆ ಮತ್ತು ಅರ್ಥ ವಿವರಣ ಸಾಮರ್ಥ್ಯವನ್ನು ಹೆಚ್ಚಿಸಲು ಪ್ರಯತ್ನಿಸಬಹುದು. ಆದಾಗ್ಯೂ ನಾವು ಪರಿವರ್ತನೆಯಾಗಲು ಸಿದ್ಧರಿದ್ದರೆ ಮಾತ್ರ ಇವುಗಳಲ್ಲಿ ಯಾವುದನ್ನಾದರೂ ಸಾಧಿಸಲು ಸಾಧ್ಯ. ಮುಂದಿನ ಅಧ್ಯಾಯಗಳಲ್ಲಿ ‘ಪರಿವರ್ತನೆ’ಯ ಕೆಲವು ಕ್ಷೇತ್ರಗಳನ್ನು ನಾವು ನೋಡುವೆವು.

ನಮ್ಮ ದೃಷ್ಟಿಯು ಕರ್ತನ ಮೇಲಿದ್ದರೆ, ನಾವು ಆತನ ಸಾರೂಪ್ಯಕ್ಕೆ ಪರಿವರ್ತನೆಯಾಗುವುದು ಅನಿವಾರ್ಯ ಪರಿಣಾಮವಾಗಿದೆ. ನಿಜವೆಂದರೆ, ನಾವು ಹೆಚ್ಚು ಆತನ ಸಮೀಪ ಹೋಗಿ ಆತನ ಮಹಿಮೆಯನ್ನು ದೃಷ್ಟಿಸಿದಂತೆ, ಪರಿವರ್ತನೆಯಾಗಬೇಕಾದ ನಮ್ಮ ಜೀವನಗಳ ಹೆಚ್ಚು ಕ್ಷೇತ್ರಗಳನ್ನು ಗುರುತಿಸಲು ಪ್ರಾರಂಭಿಸುವೆವು.

# 2

# ನಮ್ಮ ಉದ್ದೇಶ ಮತ್ತು ಅಪೇಕ್ಷೆಗಳಲ್ಲಿ ಪರಿವರ್ತನೆ

**ದೇವರೇ, ನನ್ನಲ್ಲಿ ಶುದ್ಧ ಹೃದಯವನ್ನು ನಿರ್ಮಿಸು; ನನಗೆ ಸ್ಥಿರ ಚಿತ್ತವನ್ನು ಅನುಗ್ರಹಿಸಿ ನನ್ನನ್ನು ನೂತನ ಪಡಿಸು**'' (ಕೀರ್ತನೆಗಳು 51:10).

ನಮ್ಮ ಆಂತರ್ಯದ ಉದ್ದೇಶಗಳೂ, ಅಪೇಕ್ಷೆಗಳೂ ಅತ್ಯಂತ ಮುಖ್ಯವಾಗಿವೆ. ಒಬ್ಬ ಅತ್ಯಂತ ಆತ್ಮಿಕ ಮತ್ತು ಒಳ್ಳೆಯ ಹೃದಯದ ಕ್ರೈಸ್ತನು ಕೂಡ ಒಂದು ನಿರ್ಧಿಷ್ಟ ವಿಷಯದಲ್ಲಿ ತಪ್ಪು ಉದ್ದೇಶ ಅಥವಾ ಅಪೇಕ್ಷೆ ಹೊಂದಿರಬಹುದೆಂದು ನಾವು ಗ್ರಹಿಸುವ ಅಗತ್ಯವಿದೆ. ಅಂಥ ಕೆಟ್ಟದ್ದರಿಂದ ನಾವು ಯಾರೂ ಪ್ರತ್ಯೇಕಿಸಲ್ಪಟ್ಟಿಲ್ಲ. ಬದಲಾಗಿ, ಇವುಗಳ ವಿಷಯದಲ್ಲಿ ನಾವು ನಿರಂತರವಾಗಿ ಎಚ್ಚರದಿಂದಿರಬೇಕು. ''ನಿನ್ನ ಹೃದಯವನ್ನು ಬಹು ಜಾಗರೂಕತೆಯಿಂದ ಕಾಪಾಡಿಕೋ; ಅದರೊಳಗಿಂದ ಜೀವಧಾರೆಗಳು ಹೊರಡುವವು'' ಎಂದು ಕರ್ತನು ಎಚ್ಚರಿಸುತ್ತಾನೆ (ಜ್ಞಾನೋಕ್ತಿಗಳು 4:23). ನಮ್ಮ ಹೃದಯವು ಕೆಟ್ಟ ಉದ್ದೇಶಗಳ ಬಂಧನಕ್ಕೊಳಗಾಗದಂತೆ ಕಾಪಾಡಿಕೊಳ್ಳುವುದು ನಮ್ಮ ಜವಾಬ್ದಾರಿಯಾಗಿದೆ. ನಮ್ಮ ಸ್ವಂತ ಹೃದಯಗಳನ್ನು ನಾವು ಪರಿಶೋಧಿಸಿಕೊಂಡು ಅಲ್ಲಿ ಅಂಥ ಉದ್ದೇಶಗಳೂ, ಅಪೇಕ್ಷೆಗಳೂ ಇವೆಯೋ ಎಂದು ಹುಡುಕುವುದರಲ್ಲಿ ತಪ್ಪೇನಿಲ್ಲ. ಇದು ಪರಿವರ್ತನೆಗೆ ಮುಖ್ಯ ಮತ್ತು ಮೊದಲ ಹೆಜ್ಜೆಯಾಗಿದೆ. ನಮ್ಮನ್ನು ಪರೀಕ್ಷಿಸಿಕೊಳ್ಳಲು ಪರಿಶುದ್ಧ ಗ್ರಂಥಗಳು ನಮಗೆ ಪುನಃ ಪುನಃ ಹೇಳುತ್ತವೆ.

**''ಪ್ರತಿ ಮನುಷ್ಯನು ತನ್ನನ್ನು ಪರೀಕ್ಷಿಸಿಕೊಂಡವನಾಗಿ ಆ ರೊಟ್ಟಿಯಲ್ಲಿ ತಕ್ಕೊಂಡು ತಿನ್ನಲಿ, ಆ ಪಾತ್ರೆಯಲ್ಲಿ ಕುಡಿಯಲಿ''** (1 ಕೊರಿಂಥದವರಿಗೆ 11:28).

**''ನಮ್ಮನ್ನು ನಾವೇ ವಿಚಾರಿಸಿಕೊಂಡರೆ ನ್ಯಾಯ ವಿಚಾರಣೆಗೊಳಗಾಗುವದಿಲ್ಲ''** (1 ಕೊರಿಂಥದವರಿಗೆ 11:31).

**''ಕ್ರಿಸ್ತ ನಂಬಿಕೆಯಲ್ಲಿ ಇದ್ದೀರೋ ಇಲ್ಲವೋ ಎಂದು ನಿಮ್ಮನ್ನು ನೀವೇ ಪರೀಕ್ಷಿಸಿಕೊಳ್ಳಿರಿ, ನಿಮ್ಮನ್ನು ಪರಿಶೋಧಿಸಿಕೊಳ್ಳಿರಿ. ಏನು, ಯೇಸು ಕ್ರಿಸ್ತನು ನಿಮ್ಮಲ್ಲಿದ್ದಾನೆಂಬುದು ನಿಮ್ಮನ್ನು ಕುರಿತು ನಿಮಗೆ ಚೆನ್ನಾಗಿ ತಿಳಿಯುವುದಿಲ್ಲವೋ? ಆತನು ನಿಮ್ಮಲ್ಲಿಲ್ಲದಿದ್ದರೆ ನೀವು ಅಯೋಗ್ಯರೇ''** (2 ಕೊರಿಂಥದವರಿಗೆ 13:5).

## ಸೇವೆಯಲ್ಲಿ ಉದ್ದೇಶಗಳು

ತಪ್ಪು ಉದ್ದೇಶಗಳನ್ನೂ, ಅಪೇಕ್ಷೆಗಳನ್ನೂ ಗುರುತಿಸಿಕೊಂಡ ಬಳಿಕ, ನಾವು ಅವುಗಳನ್ನು ಒಪ್ಪಿ ಅರಿಕೆ ಮಾಡಿ, ಕರ್ತನು ನಮ್ಮನ್ನು ಪರಿವರ್ತಿಸಬೇಕೆಂದು ಆತನನ್ನು ಕೇಳಬೇಕು. ದಾವೀದನು ಪ್ರಾರ್ಥಿಸಿದಂತೆ, ''ಕರ್ತನೇ, ನನ್ನಲ್ಲಿ ಶುದ್ಧ ಹೃದಯವನ್ನು ನಿರ್ಮಿಸು; ನನಗೆ ಸ್ಥಿರ ಚಿತ್ತವನ್ನು ಅನುಗ್ರಹಿಸಿ, ನನ್ನನ್ನು ನೂತನ ಪಡಿಸು'' ಎಂದು ಪ್ರಾರ್ಥಿಸಿರಿ. ವೈಯುಕ್ತಿಕವಾಗಿ, ನಮ್ಮ ಸ್ವಂತ ಜೀವನಗಳಲ್ಲಿ ನಾವು ಜನರ ಸೇವೆ ಮಾಡುವಾಗ, ವಿವಿಧ ಕ್ಷೇತ್ರಗಳಲ್ಲಿ ತಪ್ಪು ಉದ್ದೇಶಗಳ ಕುರಿತು ಸತತವಾಗಿ ಎಚ್ಚರ ವಹಿಸಬೇಕು. ''ನಾನು ಇದನ್ನು ಏಕೆ ಮಾಡುತ್ತಿದ್ದೇನೆ? ನನ್ನ ಉದ್ದೇಶವೇನು? ನನ್ನ ಮನಃಪೂರ್ವಕವಾದ ಆಸಕ್ತಿ ಏನು?'' ಎಂದು ನಮ್ಮನ್ನು ಪ್ರಶ್ನಿಸಿಕೊಳ್ಳಬೇಕು. ಉದಾಹರಣೆಗಾಗಿ, ಒಂದು ಸ್ಥಳದಲ್ಲಿ ಸೇವೆಗಾಗಿ ಆಮಂತ್ರಿಸಿದರೆ, ಕರ್ತನು ನಮ್ಮ ಹೃದಯಗಳನ್ನು ಸಿದ್ಧಪಡಿಸಿ ಅಲ್ಲಿಗೆ ಹೋಗುವುದರಲ್ಲಿ ನಿರ್ಮಲ ಉದ್ದೇಶವನ್ನು ಕೊಡಬೇಕೆಂದು ಆತನನ್ನು ಕೇಳಬೇಕು. ಅಲ್ಲಿ ನಮ್ಮ ಸೇವೆಗೆ ಅವರು ಕೊಡಬಹುದಾದ ಕಾಣಿಕೆಯ ಮೇಲೆ ನಾವು ಮನಸ್ಸನ್ನು ಕೊಡದಂತೆ ನಮ್ಮ ಹೃದಯಗಳನ್ನು ಕಾಯ್ದುಕೊಳ್ಳಬೇಕು. ನಾವು ದೇವರ ಪ್ರೀತಿಯ ಮತ್ತು ಬಲದ ಅದ್ಭುತ ಪ್ರಕಟಣೆಗಳನ್ನು ಅಪೇಕ್ಷಿಸುವುದರಿಂದ, 'ದೇವರ ಅಭಿಷಕ್ತ ಸೇವಕ' ಎಂದು ಜನರು ತಿಳಿಯಬೇಕೆಂಬ ಹೃದಯದ ದೂರದ ಉದ್ದೇಶದ ಕುರಿತು ಎಚ್ಚರ ವಹಿಸಬೇಕು. ಸೇವೆಯಲ್ಲಿ ಬೆಳವಣಿಗೆಯನ್ನು ಅರಸುತ್ತ ಮುಂದುವರಿದಂತೆ, 'ನಮ್ಮ ಸ್ವಂತ ಸೇವೆಯ' ಅಥವಾ 'ದೇವರ ರಾಜ್ಯದ' ಅಭಿವೃದ್ಧಿಯ ಅಪೇಕ್ಷೆಯೋ ಎಂಬಲ್ಲಿ ನಮ್ಮ ಹೃದಯವನ್ನು ಶೋಧಿಸಿಕೊಳ್ಳಬೇಕು. ಇದು 'ದೇವರ ಕೆಲಸ', 'ನಮ್ಮ ಕೆಲಸವಲ್ಲ' ಮತ್ತು ಇದು 'ದೇವರ ರಾಜ್ಯ', 'ನಮ್ಮ ರಾಜ್ಯವಲ್ಲ' ಎಂದು ಸದಾ ಜ್ಞಾಪಕದಲ್ಲಿಡಬೇಕು.

ನಮ್ಮ ಜೀವನಗಳ ಅನೇಕ ವಿಷಯಗಳನ್ನು ನಮ್ಮ ಉದ್ದೇಶಗಳು ಮತ್ತು ಅಪೇಕ್ಷೆಗಳು ನಿರ್ಧರಿಸಿ ಅವುಗಳ ಮೇಲೆ ಪರಿಣಾಮ ಬೀರುವುದರಿಂದ ಸೇವೆಯಲ್ಲಿ ಎಚ್ಚರವಾಗಿರುವುದರ ಪ್ರಾಮುಖ್ಯತೆಯನ್ನು ನಾನು ಒತ್ತಿ ಹೇಳಿದ್ದೇನೆ. ಎಲ್ಲದಕ್ಕಿಂತಲೂ ಮೇಲಾಗಿ, ದೇವರು ನಮ್ಮ ಬಾಹ್ಯ ಅಭಿವ್ಯಕ್ತತೆಗಳನ್ನು ದಾಟಿ ದೂರ ನೋಡುತ್ತಾನೆ. ''ಯೆಹೋವನು ಮನುಷ್ಯರಂತೆ ಹೊರಗಿನ ತೋರಿಕೆಯನ್ನು ನೋಡದೆ ಹೃದಯವನ್ನೇ ನೋಡುವವನಾಗಿದ್ದಾನೆ'' (1 ಸಮುವೇಲನು 16:7). ದೇವರು ಆಂತರ್ಯದ ಮನುಷ್ಯನಲ್ಲಿ ಸತ್ಯವನ್ನು ಅಪೇಕ್ಷಿಸುತ್ತಾನೆ (ಕೀರ್ತನೆಗಳು 51:6). ನಿಮ್ಮ

ಉದ್ದೇಶಗಳ ಮತ್ತು ಅಪೇಕ್ಷೆಗಳ ಕಡೆಗೆ ಎಚ್ಚರ ವಹಿಸಿರಿ. ನೀವು ಸರಿಯಾಗಿರದಿದ್ದರೆ, ಕರ್ತನ ಬಳಿಗೆ ಹೋಗಿ ನಿಮ್ಮನ್ನು ಪ-ರಿ-ವ-ರ್ತಿ-ಸ-ಲು ಆತನನ್ನು ಕೇಳಿರಿ!

> ನಮ್ಮ ಹೃದಯವು ಕೆಟ್ಟ ಉದ್ದೇಶಗಳ ಬಂಧನಕ್ಕೊಳಗಾಗದಂತೆ ಕಾಪಾಡಿಕೊಳ್ಳುವುದು ನಮ್ಮ ಜವಾಬ್ದಾರಿಯಾಗಿದೆ.

# 3

# ನಮ್ಮ ಯೋಚನೆ, ಮನೋಭಾವನೆ, ನುಡಿ ಮತ್ತು ನಡತೆಗಳಲ್ಲಿ ಪರಿವರ್ತನೆ

**ಇಹಲೋಕದ ನಡವಳಿಕೆಯನ್ನು ಅನುಸರಿಸದೆ ನೂತನ ಮನಸ್ಸನ್ನು ಹೊಂದಿಕೊಂಡು ಪರಲೋಕಭಾವದವರಾಗಿರಿ** (ರೋಮಾಪುರದವರಿಗೆ 12:2).

**ನೀವು ನಿಮ್ಮ ಆಂತರ್ಯದಲ್ಲಿ (ಮನೋಭಾವನೆಯಲ್ಲಿ) ಹೊಸಬರಾಗಿ ನೂತನ ಸ್ವಭಾವವನ್ನು ಧರಿಸಿಕೊಳ್ಳಿರಿ** (ಎಫೆಸದವರಿಗೆ 4:23).

**ಯೌವನಸ್ಥನೆಂದು ನಿನ್ನನ್ನು ಅಸಡ್ಡೆ ಮಾಡುವುದಕ್ಕೆ ಯಾರಿಗೂ ಅವಕಾಶ ಕೊಡದೆ ನಂಬುವವರಿಗೆ ನಡೆ, ನುಡಿ, ಪ್ರೀತಿ, ನಂಬಿಕೆ, ಶುದ್ಧತ್ವ ಇವುಗಳ ವಿಷಯದಲ್ಲಿ ನೀನೇ ಮಾದರಿಯಾಗಿರು** (1 ತಿಮೊಥೆಯನಿಗೆ 4:12)

ನಮ್ಮ ಯೋಚನೆ ಮತ್ತು ಮನೋಭಾವನೆಗಳಲ್ಲಿ ಒಂದು ಪರಿವರ್ತನೆಯನ್ನು ನೋಡಬೇಕೆಂದು ಕರ್ತನು ಇಚ್ಛಿಸುತ್ತಾನೆ. ''ನೂತನ ಮನಸ್ಸನ್ನು ಹೊಂದಿಕೊಂಡು'' (ರೋಮಾಪುರದವರಿಗೆ 12:2) ಎಂಬುದು ನಮ್ಮ ಯಥಾದೃಷ್ಟರೂಪಣ, ಮನೋಭಾವನೆ, ಮತ್ತು ಯೋಚನಾ ರೀತಿಯಲ್ಲಿ ಒಂದು ಪರಿವರ್ತನೆಯಾಗಬೇಕೆಂದು ಸೂಚಿಸುತ್ತದೆ. ಇದಕ್ಕೆ ಅನೇಕ ಪರಿಮಾಣಗಳಿವೆ. ನಾವು 'ಪ್ರಾಪಂಚಿಕ ಯೋಚನೆಗಳನ್ನು' ಮಾಡುವ ಅಥವಾ 'ಪ್ರಾಪಂಚಿಕವಾದ' ಮನೋಭಾವನೆಗಳನ್ನು ಹೊಂದಿಕೊಳ್ಳುವುದರ ಬದಲಾಗಿ ಸ್ವತಃ ದೇವರ ಯೋಚನೆಗಳನ್ನೂ, ಮನೋಭಾವನೆಗಳನ್ನೂ ಪಡೆದುಕೊಳ್ಳಬೇಕು. ನಾವು 'ಕೀಳು' ಯೋಚನೆಗಳನ್ನು ತ್ಯಜಿಸಿ ದೇವರ ವಾಕ್ಯಕ್ಕೆ ಸಮರಸವಾದ ಮತ್ತು ನಂಬಿಕೆಯ ಎತ್ತರ ನಿಲುವಿನಿಂದ ಯೋಚಿಸುವಂತೆ ನಮ್ಮ ಯೋಚನಾ ಮಟ್ಟವನ್ನು ಹೆಚ್ಚಿಸಬೇಕು. ನಮ್ಮಲ್ಲಿ ಕೆಲವರು ನಮ್ಮ ನಿರಾಶಾವಾದ, 'ಮಾಡಲಾಸಾಧ್ಯ' ಎಂಬ ಆ ನಕಾರಾತ್ಮಕ ಬಳಿಸಾರುವಿಕೆಯನ್ನು ತೊರೆದುಬಿಟ್ಟು ದೇವರ ಮೇಲಿನ ಸರಳ ವಿಶ್ವಾಸದ ಮೂಲಕ ನಮ್ಮ ಮುಂದಿರುವ ಮಹಾ ಸಾಧ್ಯತೆಗಳನ್ನು ನೋಡಬೇಕು. ನಮ್ಮಲ್ಲಿ ಹಲವರು ವಿಷಯಗಳನ್ನು 'ಹಳೆಯ ರೀತಿ'ಯಲ್ಲಿ ಮಾಡುವುದರಲ್ಲಿ ಅಷ್ಟು ಮುಳುಗಿದ್ದು ಸ್ವತಃ ಕರ್ತನೇ ಮಾಡಬೇಕೆಂದಿರುವ 'ನೂತನ ಮತ್ತು ಹೊಸ' ವಿಧಾನಗಳನ್ನು ಸ್ವೀಕರಿಸಲೂ ಸಿದ್ಧರಾಗಿಲ್ಲ. ನಮಗೆ ಕಲಿಸಲ್ಪಟ್ಟ

ರೀತಿಯಿಂದಲ್ಲದೆ ಇನ್ನಾವ ರೀತಿಯಿಂದಲೂ ದೇವರು ಕಾರ್ಯ ಮಾಡಲು ಸಾಧ್ಯವಿಲ್ಲ ಎಂದು ತಿಳಿಯುವ ಮಟ್ಟಿಗೆ ನಮ್ಮ ಧಾರ್ಮಿಕ ರೂಢಿಗಳೂ, ಸಂಪ್ರದಾಯಗಳೂ ನಮ್ಮ ಯೋಚನೆಯಲ್ಲಿ ನಮ್ಮನ್ನು ಅಷ್ಟು ಬಂಧಿಸಿವೆ.

ಇನ್ನು ಕೆಲವರ ಕನಸುಗಳು ಎಷ್ಟು ಚಿಕ್ಕವು, ಆಕಾಂಕ್ಷೆಗಳು ಎಷ್ಟು ಕೆಳಗಿನವು, ದರ್ಶನಗಳು ಎಷ್ಟು ಮಸುಕು ಎಂದರೆ ಅವರು ಈ ಕ್ಷೇತ್ರಗಳಲ್ಲಿ ಒಂದು ಪರಿವರ್ತನೆಯನ್ನು ಕಾಣಬೇಕಾಗಿದೆ. ನಾವು ದೊಡ್ಡ ಕನಸುಗಳನ್ನು ಕಾಣಬೇಕು, ದೇವರಿಗಾಗಿ ದೊಡ್ಡ ಸಾಧನೆಗಳನ್ನು ಮಾಡಲು ಮಹತ್ವಾಕಾಂಕ್ಷಿಗಳಾಗಿರಬೇಕು ಮತ್ತು ಪ್ರಪಂಚದಲ್ಲಿ ಒಂದು ಮಾರ್ಪಾಟನ್ನುಂಟು ಮಾಡುವ ದರ್ಶನವನ್ನು ಪಡೆಯಬೇಕು. ನಮ್ಮಲ್ಲಿ ಇನ್ನು ಹಲವರು - ವಿಫಲತೆ, ಸೋಲು, ನಿರಾಶೆ ಅಥವಾ ಆಪತ್ತುಗಳಿಂದಾಗಿ - ನಿರಾಸಕ್ತಿ, ನಿರೀಕ್ಷೆಯಿಲ್ಲದ ಅಥವಾ ಹತಾಶ ಸ್ಥಿತಿಗೆ ಕೂಡ ಬಿದ್ದಿದ್ದಾರೆ. ಅಲ್ಲಿ ಚಾಲನ ಶಕ್ತಿಯಿಲ್ಲ, ಪ್ರೇರಣೆಯಿಲ್ಲ, ಪ್ರಗತಿ ಮತ್ತು ವೃದ್ಧಿಗಾಗಿ ಪ್ರಯಾಸವಿಲ್ಲ. ನಾವು ಒಪ್ಪಿ ದೇವರಿಗೆ ನಮ್ಮ ಸ್ವಲ್ಪ ಸಹಕಾರವನ್ನು ಕೊಟ್ಟರೆ ಆತನು ಅವೆಲ್ಲವನ್ನೂ ಪರಿವರ್ತನೆಗೊಳಿಸ ಶಕ್ತನು!! ಕೆಲವರು ಸುಮ್ಮನೆ ಉದಾಸೀನರಾಗಿರಬಹುದು, ವಿಷಯಗಳ ಕಡೆಗೆ ನಿರಾಸಕ್ತರು, ಬಳಲಿದಂತೆ ತೋರಿಸುವವರಾಗಿರಬಹುದು. ನಮ್ಮ ಮನೋಭಾವನೆಗಳಲ್ಲಿ ಒಂದು ತೀವ್ರ ಪರಿಣಾಮದ ಪರಿವರ್ತನೆಯು ನಮಗೆ ಬೇಕಾಗಿದೆ!! ಕೆಲವರು ನಿರಂತರ ಆಲಸಿಗರಾಗಿ ಕಾಲಹರಣ ಮಾಡುವವರಾಗಿದ್ದು ಅವರು ಅದನ್ನು ಪರಿವರ್ತನೆ ಮಾಡಬೇಕಾಗಿದೆ. ಕೆಲವರು ಯೋಜನೆಗಳ ಕುರಿತು ಮಾತಾಡುವವರಾಗಿದ್ದಾರೆ, ಆದರೆ ''ನೇಗಿಲಿನ ಮೇಲೆ ಮಾತ್ರ ತಮ್ಮ ಕೈಗಳನ್ನು'' ಇಡರು. ಇದು ಕೂಡ ಪರಿವರ್ತನೆಯಾಗಬೇಕು. ಕೆಲವರು ದೇವರಿಗೆ ಇಷ್ಟವಿಲ್ಲದ ಭಯ, ಹೆಮ್ಮೆ, ಕಹಿತ್ವ, ಮತ್ತಿತರ ನಡಾವಳಿಗಳಿಗೆ ಕಟ್ಟು ಬಿದ್ದಿದ್ದಾರೆ, ಆತನಿಗೆ ಅವು ಪರಿವರ್ತನೆಯಾಗಬೇಕಾಗಿದೆ. ನಮ್ಮ ನುಡಿ ಮತ್ತು ನಡತೆಗಳಲ್ಲಿ ದೇವರು ನಮ್ಮನ್ನು ಮೇಲ್ಮಟ್ಟಕ್ಕೆ ಎತ್ತಬೇಕೆಂದು ಇಷ್ಟವುಳ್ಳವನಾಗಿದ್ದಾನೆ. ನಮ್ಮ ನುಡಿ ಮತ್ತು ನಡತೆಗಳು ಒಬ್ಬ ವಿಶ್ವಾಸಿಗೆ ಯೋಗ್ಯವಾದವುಗಳಾಗಿರಬೇಕು.

ವೈಯುಕ್ತಿಕವಾಗಿ, ನಮ್ಮ ಸ್ವಂತ ಜೀವನಗಳಲ್ಲಿ ಸರಿಯಲ್ಲದ ಯೋಚನೆಗಳ ಅಥವಾ ಮನೋಭಾವನೆಗಳ ಅರಿವು ನಮಗಾದಾಗ, ನಾವು ಕರ್ತನ ಬಳಿಗೆ ಹೋಗಿ, ಅವುಗಳನ್ನು ಆತನ ಮುಂದೆ ಒಪ್ಪಿಕೊಂಡು ಆತನು ನಮ್ಮನ್ನು ಪರಿವರ್ತನೆ ಮಾಡುವಂತೆ ಪ್ರಾರ್ಥಿಸಬೇಕು. ಅನೇಕ ವರ್ಷಗಳ ಕಾಲ ಕರ್ತನೊಂದಿಗೆ ನಡೆದ ಬಳಿಕವೂ ನಮ್ಮ

ಜೀವನಗಳಲ್ಲಿ ಪರಿವರ್ತನೆಯಾಗಬೇಕಾದ ಕ್ಷೇತ್ರಗಳ್ನನು ನಾವು ಇನ್ನೂ ಗುರುತಿಸುವೆವು. ನಿಮ್ಮ ಜೀವನಗಳಲ್ಲಿ ನೀವು ದೇವರ ಬಳಿಗೆ ತಂದು, ''ಕರ್ತನೇ, ನನ್ನ ಜೀವನದಲ್ಲಿ ಇದು ಪರಿವರ್ತನೆಯಾಗಬೇಕು'' ಎಂದು ಹೇಳಬಹುದಾದ ಮನೋಭಾವನೆಗಳನ್ನು ಯೋಚನಾ ಮಾದರಿಗಳನ್ನೂ ಗುರುತಿಸಬಲ್ಲಿರೋ?

> ನಾವು ಪ್ರಾಪಂಚಿಕ ಯೋಚನೆಗಳನ್ನು ಮಾಡುವ ಅಥವಾ ಪ್ರಾಪಂಚಿಕವಾದ ಮನೋಭಾವನೆಗಳನ್ನು ಹೊಂದಿಕೊಳ್ಳುವುದರ ಬದಲಾಗಿ ಸ್ವತಃ ದೇವರ ಯೋಚನೆಗಳನ್ನೂ ಮನೋಭಾವನೆಗಳನ್ನೂ ಪಡೆದುಕೊಳ್ಳಬೇಕು.

# 4

# ಅನಿರೀಕ್ಷಿತ ಪರಿವರ್ತನೆಗಳಿಗೆ ತೆರೆದಿರುವುದು

**ಗಾಳಿಯು ಮನಸ್ಸು ಬಂದ ಕಡೆ ಬೀಸುತ್ತದೆ; ಅದರ ಸಪ್ಪಳವನ್ನು ಕೇಳುತ್ತೀ; ಆದರೆ ಅದು ಎಲ್ಲಿಂದ ಬರುತ್ತದೋ ಎಲ್ಲಿಗೆ ಹೋಗುತ್ತದೋ ನಿನಗೆ ತಿಳಿಯದು; ಆತ್ಮನಿಂದ ಹುಟ್ಟಿದವರೆಲ್ಲರು ಅದರಂತೆಯೇ''** (ಯೋಹಾನ 3:8).

ಆತ್ಮನಿಂದ ಹುಟ್ಟುವುದು ಎಲ್ಲವನ್ನೂ ಸಂಪೂರ್ಣವಾಗಿ ವಿವರಿಸಲಾಗದ ಒಂದು ಜೀವನದೊಳಕ್ಕೆ ನಮ್ಮನ್ನು ನಡೆಸುತ್ತವೆ. ಕೆಲವು ವಿಷಯಗಳು ನಾವು ಅಧೀನರಾಗಿ ಅನುಭವಿಸಬೇಕಾದವುಗಳು ಮಾತ್ರ. ಕರ್ತನಾದ ಯೇಸು ಹೊಸತಾಗಿ ಹುಟ್ಟುವುದನ್ನು ಮನಸ್ಸು ಬಂದ ಕಡೆ ಬೀಸುವ ಗಾಳಿಗೆ ಸಮನಾಂತರ ಮಾಡಿದನು. ನಾವು ಅದನ್ನು ಅನುಭವಿಸುತ್ತೇವೆ ಮಾತ್ರ. ಅದರ ಸರಿಯಾದ ಮೂಲವನ್ನಾಗಲೀ ಅದು ಮುಟ್ಟಬೇಕಾದ ಸ್ಥಳವನ್ನಾಗಲಿ ನಾವು ತಿಳಿದಿಲ್ಲ. ಅದೇ ರೀತಿಯಾಗಿ ಪವಿತ್ರಾತ್ಮನ ಅನೇಕ ಕೆಲಸಗಳನ್ನು ವಿವರಿಸಲಾಗದು. ನಾವು ಆತನು ಕಾರ್ಯಗತಗೊಳಿಸಿದ್ದನ್ನು ಅನುಭವಿಸಿ ತಿಳಿಯುತ್ತೇವೆ ಮಾತ್ರ. ಕೆಲವು ವೇಳೆ ಕರ್ತನು ನಮ್ಮ ಜೀವನಗಳಲ್ಲಿ ಪೂರ್ಣ ಅನಿರೀಕ್ಷಿತ ಘಟನೆಗಳನ್ನೂ, ಪರಿಸ್ಥಿತಿಗಳನ್ನೂ ಹೊಂದಿಸಿ ಏರ್ಪಡಿಸಬಹುದು. ಅಂಥ ವಿಷಯಗಳನ್ನು ಎದುರಿಸಲಿರುವೆವೆಂದು ನಮಗೆ ಯಾವ ಪೂರ್ವ ಸೂಚನೆಯೂ ಇರಲಿಲ್ಲ. ಅವು ನಮ್ಮ ಯೋಜನೆಯಲ್ಲಿರಲಿಲ್ಲ. ಆದರೂ ಕರ್ತನಿಗೆ ಅಧೀನರಾಗಿ ಗಾಳಿ ಬೀಸಿದ ಕಡೆ ಹೋಗುವುದು ಅತ್ಯಂತ ಬುದ್ಧಿವಂತಿಕೆಯ ವಿಷಯ. ಕರ್ತನು ನಮ್ಮ ಜೀವನಗಳೊಳಕ್ಕೆ ತರುವ ಅನಿರೀಕ್ಷಿತ ಬದಲಾವಣೆಗಳಿಗೆ ನಾವು ತೆರೆಯಲು ಕಲಿಯುವುದು ಅತ್ಯಂತ ಮುಖ್ಯವಾಗಿದೆ. ಇವು ನಮ್ಮ ಜೀವನಗಳಲ್ಲಿ ತಿರುವುಗಳಾಗಬಹುದು.

## ನಮ್ಮ ಸೇವೆಯಲ್ಲಿ ಪರಿವರ್ತನೆಗಳು

ಏಮಿ (ನನ್ನ ಹೆಂಡತಿ) ಮತ್ತು ನಾನು ಇಬ್ಬರೂ ಕರ್ತನು ನಮಗಾಗಿ ಸಿದ್ಧಪಡಿಸಿ ಇಟ್ಟಿದ್ದವುಗಳಿಗೆ ನಮ್ಮನ್ನು ನಡಿಸಲು ಹೇಗೆ ಅನಿರೀಕ್ಷಿತ ಪರಿವರ್ತನೆಗಳನ್ನು ಉಪಯೋಗಿಸಿದನೆಂದು ಅನೇಕ ನಿದರ್ಶನಗಳನ್ನು ವಿವರವಾಗಿ ಹೇಳಬಹುದು. 1995ರಲ್ಲೊಮ್ಮೆ ನನ್ನ ತಂದೆ ಒಂದು ಕೆಲಸದ ನಿಮಿತ್ತ ಅಮೇರಿಕಾಗೆ ಬಂದರು.

ಆಗ ನಾವು ವಾಸಿಸುತ್ತಿದ್ದ ನ್ಯೂಜರ್ಸಿಯ ನ್ಯೂಬ್ರನ್ಸ್‌ವಿಕ್‌ನಲ್ಲಿ ಅವರು ಒಂದು ರಾತ್ರಿ ಉಳಿದು ನನ್ನನ್ನು ಭೇಟಿ ಮಾಡಲು ನಿರ್ಧರಿಸಿದರು. ಅವರು ಒಂದು ಶನಿವಾರ ಬಂದು ಮರುದಿನ ಸಾಯಂಕಾಲ ಹೊರಡುವುದಕ್ಕಿದ್ದರು. ನನ್ನ ತಂದೆಯು ಯಾವಾಗಲೂ ಆಫ್ರಿಕನ್, ಅಮೇರಿಕನ್ ಸಭೆಯವರ ಹಾಡು ಮತ್ತು ಆರಾಧನಾ ಶೈಲಿಯನ್ನು ಅನುಭವಿಸಲಿಕ್ಕಾಗಿ ಅವರ ಸಭೆಗೆ ಹೋಗಲು ಆಶಿಸಿದ್ದರು. ಸಮೀಪದಲ್ಲೊಂದು ಆಫ್ರಿಕನ್-ಅಮೇರಿಕನ್ ಸಭೆಯಿತ್ತು, ಹೀಗಾಗಿ ಭಾನುವಾರ ಬೆಳಿಗ್ಗೆ ನಾವು ಅಲ್ಲಿಗೆ ಹೋದೆವು. ನಾನು ಈ ಮೊದಲು ಎಂದೂ ಅಂಥ ಸ್ಪಂದಕ, ಆತ್ಮ ಸಂತೋಷದ ಸ್ವಪ್ರೇರಿತ ಹಾಡುಗಾರಿಕೆಯನ್ನು ನೋಡಿಯೂ ಅನುಭವಿಸಿಯೂ ಇರಲಿಲ್ಲ. ಅದು ಕಿವಿ ಕಿವಿಡಾಗುವಷ್ಟು ಬಹಳ ಗಟ್ಟಿಯಾಗಿದ್ದು ಕಟ್ಟಡವು ಕುಸಿದು ಬೀಳುತ್ತದೋ ಎಂಬಂತಿತ್ತು. ನನಗಂತೂ ಹಾಗೆ ತೋಚಿತು. ಅಲ್ಲಿಯವರೆಗೆ ನಾನು ವಿಶ್ವವಿದ್ಯಾಲಯದ ಕೊರಿಯನ್ ಸಹೋದರ ಸಹೋದರಿಯರೊಂದಿಗೆ ಕೆಲಸ ಮಾಡಿ ನಿಕಟ ಅನ್ಯೋನ್ಯತೆ ಹೊಂದಿದ್ದೆನು. ಸ್ತೋತ್ರ ಮಾಡುವುದರಲ್ಲಿ ನಾವು ಸ್ವಾತಂತ್ರ್ಯವನ್ನು ಆಸ್ವಾದಿಸಿದೆವು, ಆದರೆ ಅದು ಇಲ್ಲಿಯ ನನ್ನ ಅನುಭವದಂತಿರಲಿಲ್ಲ. ಆಗ ಸಾವಿರ ಯೋಚನೆಗಳು ನನ್ನ ಮನಸ್ಸಿನಲ್ಲಿ ಹಾದು ಹೋದವು. ಆರಾಧನೆಯಲ್ಲಿ ಅಂಥ ಸ್ವಾತಂತ್ರ್ಯವು ಸರಿಯಾದದ್ದು ಎಂದು ನಾನು ಆಂತರ್ಯದಲ್ಲಿ ತಿಳಿದೆನು. ಕರ್ತನನ್ನು ಸ್ತುತಿಸಿ ಆರಾಧಿಸಲು ನಾನು ಸ್ವತಂತ್ರನಾಗಿರಬೇಕೆಂದು ಯಾವಾಗಲೂ ಬಯಸಿದ್ದೆನು. ಆದರೆ ಆ ಆಫ್ರಿಕನ್-ಅಮೇರಿಕನ್ ಸಭೆಯಲ್ಲಿ ನಡೆಯುತ್ತಿದ್ದದ್ದಕ್ಕೆ ಅದನ್ನು ಹೋಲಿಸಿದರೆ ನಾನು ಇಟ್ಟಿಗೆಯ ಗೋಡೆಗಿಂತಲೂ ಗಟ್ಟಿಯಾದೆನೆನಿಸಿತು. ಅನಂತರ ಅಂದು ನಾನು ಒಂಟಿಯಾಗಿದ್ದಾಗ ನನಗೆ ಗಲಿಬಿಲಿಯಾಯಿತು. ನನ್ನ ಒಂದು ಭಾಗ, ‘‘ಕರ್ತನೆ, ನನಗೆ ಅಲ್ಲಿಗೆ ಹಿಂತಿರುಗಿ ಹೋಗಲು ಇಷ್ಟವಿಲ್ಲ. ನಾನು ಎಂದೂ ಅವರಂತಾಗಲಾರೆನು ಮತ್ತು ಆ ಧ್ವನಿಯ ಪರಿಮಾಣವನ್ನು ನನ್ನಿಂದ ಸಹಿಸಲಾಗದು’’ ಎಂದಿತು. ನನ್ನ ಇನ್ನೊಂದು ಭಾಗ, ‘‘ಕರ್ತನೇ, ಅವರಿಗೇನಿದೆಯೋ ಅದು ನನಗೂ ನಿಜವಾಗಿಯೂ ಬೇಕು - ನಿನ್ನನ್ನು ಆರಾಧಿಸಲು ಆ ರೀತಿಯ ಸ್ವಾತಂತ್ರ್ಯ’’ ಎಂದಿತು. ಸರಿ, ಸಂಕ್ಷೇಪವಾಗಿ, ನಾವು ಅಲ್ಲಿಗೆ ಹೋದೆನು. ಸ್ವಲ್ಪ ಸಮಯದೊಳಗೆ, ಅಲ್ಲಿ ಸೇವೆ ಮಾಡುವ ಸಂದರ್ಭಗಳು ನನಗೆ ಸಿಕ್ಕಿದವು. ನಾವು ಪ್ರತಿ ಬುಧವಾರ ರಾತ್ರಿ ಆ ಸಭೆಯಲ್ಲಿ ಸೇರಿ ಬಂದೆವು. ಅಲ್ಲಿ ನಾವು ಆಫ್ರಿಕನ್-ಅಮೇರಿಕನ್ ಸಹೋದರ ಸಹೋದರಿಯರನ್ನು ಭೇಟಿ ಮಾಡಿದೆವು. ಅಲ್ಲಿಗೆ ಬಂದಿದ್ದ ಮಾನ್ಯುಯಲ್ ಮತ್ತು ಟಾನಿಯ ಎಂಬ ಸ್ಪಾನಿಷ್ ದಂಪತಿಗಳನ್ನು ಭೇಟಿ ಮಾಡಿದೆವು. ಬಳಿಕ ಅವರು ಸ್ಥಾಪಿಸಿದ ಸ್ಪಾನಿಷ್ ಸಭೆಗೆ ಹೋಗಲು ನಮಗೆ ಆಮಂತ್ರಣ ದೊರೆಯಿತು. ಬಳಿಕ ಶೀಘ್ರದಲ್ಲೇ

ಸ್ಪಾನಿಷ್ ಸಭೆಯಲ್ಲಿ ಪಾಲ್ಗೊಳ್ಳಲು ಹೆಚ್ಚು ಅವಕಾಶಗಳು ದೊರೆತವು. ದೇವರ ವಾಕ್ಯವನ್ನು ಕಲಿಯಲು ಮಾನ್ಯುಯಲ್ ಮತ್ತು ಟಾನಿಯು ನಮ್ಮೊಂದಿಗೆ ಪ್ರತಿ ವಾರವೂ ಸಮಯ ಕಳೆದರು. ಏಮಿ ಅವರ ಸ್ಪಾನಿಷ್ ಸಭೆಯ ಹಾಡಿನ ಸೇವೆಯಲ್ಲಿ ನೆರವು ನೀಡಿದರು ಮತ್ತು ಅವರ ಸಹಾಯದಿಂದ ನವಂಬರ್ 1996ರಲ್ಲಿ ನಾವು ಸೇವೆಗಾಗಿ ಈಕ್ವೆಡೋರ್‌ಗೆ ಹೋದೆವು! ನನ್ನ ತಂದೆಯ ನ್ಯೂಬ್ರೂನ್ಸ್‌ವಿಕ್‌ನ ಒಂದು ದಿನದ ಭೇಟಿಯಿಂದ ಉಂಟಾದ ಸರಣಿ ಪ್ರತಿಕ್ರಿಯೆಗಳನ್ನು ನೋಡಿರಿ!! ಅನಿರೀಕ್ಷಿತ? ನಿಶ್ಚಯವಾಗಿ!! ನಾವು ಅದನ್ನು ಯೋಚಿಸಿದ್ದೆವೋ? ನಿಶ್ಚಯವಾಗಿ ಇಲ್ಲ!! ಆತ್ಮನು ಬೀಸುವ ಕಡೆ ಹೋಗಲು ಮಾತ್ರ ಕಲಿತೆವು. ಆಫ್ರಿಕನ್-ಅಮೇರಿಕನರಿಗೆ ಅಥವಾ ಸ್ಪಾನಿಷ್ ಸಮುದಾಯಗಳಿಗೆ ನಾವು ಸೇವೆ ಮಾಡುವೆವೆಂದು ಎಂದೂ ಯೋಚಿಸಿರಲಿಲ್ಲ. ಆತನು ಎಲ್ಲಿಗೆ ಬೀಸಲು ಇಷ್ಟಪಡುತ್ತಾನೋ ಅಲ್ಲಿಗೆ ನಾವು ಹೋಗುವೆವು!! ದೇವರು ನಿಮ್ಮ ಜೀವನಗಳೊಳಕ್ಕೆ ತರಬೇಕೆಂದಿರುವ ಅನಿರೀಕ್ಷಿತ ಪರಿವರ್ತನೆಗಳಿಗಾಗಿ ಸಿದ್ಧರಾಗಿರ್ರಿ, ತೆರೆದಿರ್ರಿ.

- ಕೆಲವು ವೇಳೆ ಕರ್ತನು ನಮ್ಮ ಜೀವನಗಳಲ್ಲಿ ಪೂರ್ಣ ಅನಿರೀಕ್ಷಿತ ಘಟನೆಗಳನ್ನೂ ಪರಿಸ್ಥಿತಿಗಳನ್ನೂ ಹೊಂದಿಸಿ ಏರ್ಪಡಿಸಬಹುದು.
- ಆದರೂ ಕರ್ತನಿಗೆ ಅಧೀನರಾಗಿ ಗಾಳಿ ಬೀಸಿದ ಕಡೆ ಹೋಗುವುದು ಅತ್ಯಂತ ಬುದ್ಧಿವಂತಿಕೆಯ ಕೆಲಸ.
- ಕರ್ತನು ನಮ್ಮ ಜೀವನಗಳೊಳಗೆ ತರುವ ಅನಿರೀಕ್ಷಿತ ಬದಲಾವಣೆಗಳಿಗೆ ನಾವು ತೆರೆದಿರುವುದು ಅತ್ಯಂತ ಮುಖ್ಯವಾಗಿದೆ. ಇವು ನಮ್ಮ ಜೀವನಗಳಲ್ಲಿ ತಿರುವುಗಳಾಗಬಹುದು.

# 5

# ಪರಿವರ್ತನೆ - ಪ್ರಗತಿ ಮತ್ತು ವೃದ್ಧಿಗೆ ಅಗತ್ಯ

**ನಿಮಗೆ ನಿಜ ನಿಜವಾಗಿ ಹೇಳುತ್ತೇನೆ, ಗೋಧಿಯ ಕಾಳು ಭೂಮಿಯಲ್ಲಿ ಬಿದ್ದು ಸಾಯದಿದ್ದರೆ ಒಂದೇಯಾಗಿ ಉಳಿಯುವದು; ಸತ್ತರೆ ಬಹಳ ಫಲ ಕೊಡುವದು** (ಯೋಹಾನ 12:24).

ನಾವು ಪ್ರಭಾವದಿಂದ ಪ್ರಭಾವಕ್ಕೆ ಪರಿವರ್ತನೆಯಾಗುತ್ತೇವೆ. ಆದುದರಿಂದ, ಇಂದು ನಾವು ಅನುಭವಿಸುವ ಪ್ರಭಾವದ ಮಟ್ಟದಿಂದ ಮುಂದಿನದಕ್ಕೆ ಹೋಗಲು, ಮೊದಲು ನಾವು ಪರಿವರ್ತನೆಯಾಗಬೇಕು. ನಮ್ಮನ್ನು ನಿಂತಲ್ಲೇ ನಿಲ್ಲಿಸುವ ಅಥವಾ ಪ್ರಗತಿಗೆ ಅಡ್ಡಿಯುಂಟು ಮಾಡುವ - ಅದು ಉದ್ದೇಶ, ಮನೋಭಾವನೆ, ನಡತೆ ಅಥವಾ ನುಡಿ - ಯಾವುದೇ ಆಗಿರಲಿ, ಪರಿವರ್ತನೆಯಾಗಬೇಕು. ನಾವು ಎದ್ದು ನಿಂತು, ಅವುಗಳನ್ನು ಒಪ್ಪಿಕೊಂಡು, ದೇವರ ಸಹಾಯದಿಂದ ಅವು ಪರಿವರ್ತನೆಯಾಗುವಂತೆ ನೋಡಬೇಕು. ಆ ಒಂದು ''ಕಾಳು ಗೋಧಿ' ಸೂಚಕವಾಗಿರುವ ನಾವು ಇಂದು ಎಲ್ಲಿದ್ದೇವೆ ಎಂದು ಪರ್ಯಾಲೋಚಿಸಬಹುದು. ನಾವು 'ಬಹಳ ಫಲ' ಕೊಟ್ಟು ವೃದ್ಧಿಯಾಗುವ ಸ್ಥಿತಿಗೆ ಹೋಗಬೇಕಾದರೆ, ಮೊದಲು ನಾವು ''ಭೂಮಿಯಲ್ಲಿ ಬೀಳಬೇಕು'' ''ಸತ್ತು'' ಬಳಿಕ ''ಬಹಳ ಫಲ ಕೊಡಬೇಕು''. ಇದು ನಮ್ಮಲ್ಲಾಗುವ ಪರಿವರ್ತನೆಯ ಕಾರ್ಯಗತಿಯನ್ನು ಸೂಚಿಸುತ್ತದೆ. ಮೊದಲು ನಾವು ಭೂಮಿಯಲ್ಲಿ ಬೀಳಬೇಕು, ಇದಕ್ಕೆ ದೀನತೆ ಬೇಕಾಗಿದೆ. ನಾವು ಪರಿವರ್ತನೆಯಾಗಬೇಕಾಗಿದೆ ಎಂಬ ಸತ್ಯವನ್ನು ಒಪ್ಪಿಕೊಳ್ಳುವ ದೀನತೆಯ ಅಗತ್ಯವು ನಮಗಿದೆ. ನಾವು 'ಸ್ವ'ಕ್ಕೆ ಸಾಯಬೇಕು. ಕೆಲವೊಮ್ಮೆ ಇದು ನೋವಿನ ಕಾರ್ಯಗತಿಯಾಗಬಹುದು. ಆಗ ನಾವು ಪ್ರಗತಿ ಮತ್ತು ವೃದ್ಧಿಯನ್ನು ಅನುಭವಿಸುತ್ತಾ ಪ್ರಭಾವದ ಮುಂದಿನ ಮಟ್ಟಕ್ಕೆ ಏರಿಸಲ್ಪಡುವೆವು.

> ನಮ್ಮನ್ನು ನಿಂತಲ್ಲೇ ನಿಲ್ಲಿಸುವ ಅಥವಾ ಪ್ರಗತಿಗೆ ಅಡ್ಡಿಯುಂಟು ಮಾಡುವ - ಉದ್ದೇಶ, ಮನೋಭಾವನೆ, ನಡತೆ, ಅಥವಾ ನುಡಿ - ಯಾವುದೇ ಆಗಿರಲಿ, ಅದು ಪರಿವರ್ತನೆಯಾಗಬೇಕು.

# 6
# ಪರಿವರ್ತನೆಯ ಆತ್ಮನು

**ಆದಿಯಲ್ಲಿ ದೇವರು ಆಕಾಶವನ್ನೂ, ಭೂಮಿಯನ್ನೂ ಉಂಟು ಮಾಡಿದನು, ಭೂಮಿಯು ಕ್ರಮವಿಲ್ಲದೆಯೂ ಬರಿದಾಗಿಯೂ ಇತ್ತು; ಆದಿಸಾಗರದ ಮೇಲೆ ಕತ್ತಲಿತ್ತು; ದೇವರಾತ್ಮನು ಜಲ ಸಮೂಹಗಳ ಮೇಲೆ ಚಲಿಸುತ್ತಿತ್ತು. ಆಗ ದೇವರು - ಬೆಳಕಾಗಲಿ ಅನ್ನಲು ಬೆಳಕಾಯಿತು''** (ಆದಿಕಾಂಡ 1:1-3).

ಕರ್ತನ ಆತ್ಮನು ನಮ್ಮನ್ನು ಪ್ರಭಾವದಿಂದ ಪ್ರಭಾವಕ್ಕೆ ಪರಿವರ್ತನೆಗೊಳಿಸುತ್ತಾನೆ. ಪವಿತ್ರಾತ್ಮನು ಪರಿವರ್ತನೆಯ ಕಾರ್ಯಭಾರಿ. ಭೂಮಿಯು ಕ್ರಮವಿಲ್ಲದೆ, ಬರಿದಾಗಿ ಮತ್ತು ಕತ್ತಲಾಗಿ ಇತ್ತು. ಆದಾಗ್ಯೂ ದೇವರಾತ್ಮನು ಜಲಸಮೂಹಗಳ ಮೇಲೆ ಚಲಿಸುತ್ತಿದ್ದನು. ದೇವರು ಮಾತಾಡಿ, ''ಬೆಳಕಾಗಲಿ ಅಂದನು''. ಆಗ ದೇವರ ಸರ್ವಶಕ್ತ ಆತ್ಮನು ಕತ್ತಲೆಯ ಮಧ್ಯದಲ್ಲಿ ಬೆಳಕನ್ನು ಉಂಟು ಮಾಡಿದನು. ದೇವರು ಆ ಸೃಷ್ಟಿಯನ್ನುಂಟು ಮಾಡುವ ಮತ್ತು ಪುನಃ ಸ್ಥಾಪನೆ ಮಾಡುವ ಮಾತುಗಳನ್ನು ಆಡಲು ಸಿದ್ಧನಾದ ವೇಳೆಯಲ್ಲಿ ದೇವರ ಆತ್ಮನು ಈ ಕ್ರಮವಿಲ್ಲದ, ಕತ್ತಲಾದ, ಬರಿದಾದ ಭೂಮಿಯ ಮೇಲೆ ಚಲಿಸುತ್ತಿದ್ದನು ಎಂಬುದು ಬಹಳ ಮಹತ್ವಪೂರ್ಣವಾಗಿದೆ. ಪವಿತ್ರಾತ್ಮನು ಪರಿವರ್ತನೆಯ ಆತ್ಮನೆಂದು ನಮಗೆ ಮನಗಂಡಿದೆ. ಆತನು ಪರಿವರ್ತನೆಯನ್ನೂ, ಮಾರ್ಪಾಟನ್ನೂ ಉಂಟು ಮಾಡುವಾತನು. ಭೂಮಿಯ ಮೇಲ್ಭಾಗವು ಪುನಃ ಸ್ಥಾಪಿಸಲ್ಪಟ್ಟಾಗ ಆತನು ಅದನ್ನು ದೊಡ್ಡ ಪ್ರಮಾಣದಲ್ಲಿ ಮಾಡಿದನು (ಆದಿಕಾಂಡ 1). ಹಾಗಾದರೆ, ನಾವು ಕೂಡ ಆತನ ದೃಷ್ಟಿಯಲ್ಲಿ ಒಳ್ಳೆಯವರೆಂದು ಕಾಣಲು ತನ್ನ ಪ್ರಭಾವವನ್ನು ನಮ್ಮೊಳಕ್ಕೆ ತಂದು ನಮ್ಮನ್ನು ಮಾರ್ಪಾಟುಗೊಳಿಸಲು ಆತನಿಂದ ನಾವು ಎಷ್ಟೋ ದೊಡ್ಡ ಕಾರ್ಯವನ್ನು ಅಪೇಕ್ಷಿಸಬಹುದಾಗಿದೆ. ನಾವು ಆತನಿಗೆ ಅಧೀನರಾಗುವ ಮಟ್ಟಿಗೆ ಮಾತ್ರವೇ ಆತನು ನಮ್ಮಲ್ಲಿ ಕಾರ್ಯ ನಡೆಸುತ್ತಾನೆ. ನಿಮ್ಮ ಹೃದಯವನ್ನು ಪವಿತ್ರಾತ್ಮನಿಗೆ ತೆರೆಯಿರಿ. ನಿಮ್ಮನ್ನು ಪರಿವರ್ತಿಸಲು ಆತನನ್ನು ಕೇಳಿರಿ. ನಿಮ್ಮ ಜೀವನದಲ್ಲಿ ಪರಿವರ್ತನೆಯಾಗಬೇಕಾಗಿರುವ ಕ್ಷೇತ್ರಗಳೊಂದಿಗೆ ನೀವು ವ್ಯವಹರಿಸಲು ಆತನ ಸಹಾಯವನ್ನು ಕೇಳಿರಿ.

### ದೇವರ ವಾಕ್ಯವು ಪರಿವರ್ತನೆಯನ್ನುಂಟು ಮಾಡುತ್ತದೆ

ದೇವರ ಸೃಷ್ಟಿ ಮತ್ತು ಪುನಃ ಸ್ಥಾಪನೆಯ ಕೆಲಸದಲ್ಲಿ, ದೇವರಾತ್ಮನು ಮಾತ್ರ ಭೂಮಿಯ ಮೇಲೆ ಚಲಿಸಿದ್ದಲ್ಲದೆ, ದೇವರ ವಾಕ್ಯವು ಕೂಡ ಕತ್ತಲು ಮತ್ತು ಬರಿದಾದ ಭೂಮಿಯ ಮೇಲೆ ನಡಿಯಲ್ಪಟ್ಟಿತು (ಆದಿಕಾಂಡ 1). ಅದೇ ರೀತಿಯಾಗಿ ಆತ್ಮನೂ, ವಾಕ್ಯವೂ ಒಟ್ಟಿಗೆ ನಮ್ಮ ಜೀವನಗಳಲ್ಲಿ ಪರಿವರ್ತನೆಗಳನ್ನುಂಟು ಮಾಡುತ್ತವೆ. ನಿಮ್ಮ ಹೃದಯ ಮತ್ತು ಮನಸ್ಸುಗಳನ್ನು ದೇವರ ವಾಕ್ಯಕ್ಕೆ ತೆರೆದಿಡಿರಿ. ಅದನ್ನು ನೀವೇ ಓದಿ ಧ್ಯಾನಿಸಿರಿ, ಆಗ ದೇವರ ವಾಕ್ಯವು ಅದರ ಮಾರ್ಪಾಟುಗೊಳಿಸುವ ಬಲವನ್ನು ನಿಮ್ಮ ಜೀವನದೊಳಕ್ಕೆ ಬಿಡುಗಡೆ ಮಾಡುವುದು.

> ನಿಮ್ಮ ಹೃದಯವನ್ನು ಪವಿತ್ರಾತ್ಮನಿಗೆ ತೆರೆಯಿರಿ. ನಿಮ್ಮನ್ನು ಆತನ ಮುಂದಿರಿಸಿಕೊಂಡು ನಿಮ್ಮನ್ನು ಪರಿವರ್ತಿಸಲು ಆತನನ್ನು ಕೇಳಿರಿ. ನಿಮ್ಮ ಜೀವನದಲ್ಲಿ ಪರಿವರ್ತನೆಯಾಗಬೇಕಾಗಿರುವ ಕ್ಷೇತ್ರಗಳೊಂದಿಗೆ ನೀವು ವ್ಯವಹರಿಸಲು ಆತನ ಸಹಾಯವನ್ನು ಕೇಳಿರಿ.

## ಒಂದು ಪ್ರಾರ್ಥನೆ

### ಕರ್ತನೇ, ನನ್ನನ್ನು ಪರಿವರ್ತನೆ ಮಾಡು!

ಪ್ರಿಯ ತಂದೆಯೇ, ನಾನು ಯೇಸುವಿನ ಹೆಸರಿನಲ್ಲಿ ನಿನ್ನ ಬಳಿಗೆ ಬರುತ್ತೇನೆ. ಕರ್ತನೇ, ನನ್ನ ಜೀವನದಲ್ಲಿ ಪರಿವರ್ತನೆಯಾಗಬೇಕಾದ ವಿಷಯಗಳು ಇವೆಯೆಂದು ನಾನು ನೋಡುತ್ತೇನೆ. ಕರ್ತನೇ, ನನ್ನನ್ನು ನಿನ್ನ ವಾಕ್ಯದ ಬಲದಿಂದಲೂ ಪವಿತ್ರಾತ್ಮನಿಂದಲೂ ಪರಿವರ್ತನೆ ಮಾಡು. ನಾನು ಇರುವಲ್ಲಿಂದ ನಾನೆಲ್ಲಿರಬೇಕೆಂದು ನೀನು ಅಪೇಕ್ಷಿಸುತ್ತೀಯೋ ಅಲ್ಲಿಗೆ ಚಲಿಸಬೇಕೆಂದು ನಾನು ಇಚ್ಛಿಸುತ್ತೇನೆ. ನಾನು ಏನಾಗಬೇಕೆಂದು ನೀನು ಅಪೇಕ್ಷಿಸುತ್ತೀಯೋ ಪೂರ್ಣವಾಗಿ ಅದಾಗಬೇಕು. ನೀನು ನನಗಾಗಿ ಇಟ್ಟಿರುವ ಎಲ್ಲವುಗಳನ್ನು ನಾನು ಸ್ವೀಕರಿಸಬೇಕು. ಕರ್ತನೇ, ನನ್ನ ಹೃದಯವನ್ನೂ, ಮನಸ್ಸನ್ನೂ ಪರಿವರ್ತನೆ ಮಾಡು. ನನ್ನ ಉದ್ದೇಶಗಳನ್ನು, ನನ್ನ ಭಾವನೆಗಳನ್ನು, ನನ್ನ ನುಡಿ ಮತ್ತು ನಡತೆಗಳನ್ನು ಪರಿವರ್ತನೆ ಮಾಡು. ನನಗೆ ದೇವರ ವಿಷಯಗಳಲ್ಲಿ ಪ್ರಗತಿ ಮತ್ತು ವೃದ್ಧಿಯಾಗಲು ಅಡ್ಡಿಯುಂಟು ಮಾಡುವ ಎಲ್ಲಾ ವಿಷಯಗಳನ್ನು ತೊರೆದು ಬಿಡಲು ನನಗೆ ಸಹಾಯ ಮಾಡು. ಆಮೆನ್.

# ಆಲ್ ಪೀಪಲ್ಸ್ ಸಭೆಯೊಡನೆ ಪಾಲುಗಾರರಾಗಿರಿ

ಆಲ್ ಪೀಪಲ್ಸ್ ಸಭೆಯ ಸೇವಕರುಗಳು ಪ್ರಮುಖವಾಗಿ ಉತ್ತರ ಭಾರತದಲ್ಲಿ (ಅ) ನಾಯಕರುಗಳನ್ನು ಬಲಗೊಳಿಸುವುದು. (ಆ) ಸೇವೆಗಾಗಿ ಯೌವ್ವನಸ್ಥರನ್ನು ತರಬೇತಿಗೊಳಿಸುವುದು (ಇ) ಕ್ರಿಸ್ತನ ಅಂಗವನ್ನು ಕಟ್ಟುವುದನ್ನು, ಬಹಳ ಮುಖ್ಯ ಗುರಿಯಾಗಿರಿಸಿಕೊಂಡಿರುವ, ಭಾರತದೇಶದಾದ್ಯಂತ ತನ್ನ ಸ್ವಂತ ಎಲ್ಲೆ ಮೀರಿದ ಸ್ಥಳೀಯ ಸಭೆಯಾಗಿದೆ. ಯೌವ್ವನಸ್ಥರಿಗಾಗಿ ಅನೇಕ ತರಭೇತಿ ಅಧ್ಯಯನ ಸಂಕೀರ್ಣ, ಸಭಾಪಾಲಕರು ಮತ್ತು ಸಭಾಸೇವಕರ ಸಮಾವೇಶವನ್ನು ವರ್ಷಪೂರ್ತಿ ನಡೆಸುವುದು ಮತ್ತು ದೇವರ ವಾಕ್ಯದಲ್ಲಿ ಮತ್ತು ದೇವರಾತ್ಮನಲ್ಲಿ ವಿಶ್ವಾಸಿಗಳನ್ನು ಕಟ್ಟುವ ಉದ್ದೇಶದೊಡನೆ ಭಾರತ ದೇಶದ ಪ್ರಾದೇಶಿಕ ಭಾಷೆಗಳು ಮತ್ತು ಇಂಗ್ಲೀಷ್ ಭಾಷೆಯಲ್ಲಿ ನಮ್ಮ ಸಾವಿರಾರು ಸಂಖ್ಯೆಯ ಪುಸ್ತಗಳನ್ನು ಉಚಿತವಾಗಿ ಹಂಚುವುದನ್ನು ಇದಕ್ಕೆ ಸೇರಿಸಲ್ಪಟ್ಟಂತೆ ಮಾಡುತ್ತಿದ್ದೇವೆ.

ಇಂತಹ ಬೃಹತ್ತಾದ ಹಣದ ಒಳಗೊಳ್ಳುವಿಕೆಯನ್ನು ಮಾಡಲು ಕರ್ತನು ತಾನೇ ನಡೆಸುತ್ತಿದ್ದಾನೆ. ಒಂದು ಬಾರಿಯ ಆರ್ಥಿಕ ಸಹಾಯ ಅಥವಾ ಪ್ರತಿ ತಿಂಗಳ ಆರ್ಥಿಕ ಸಹಾಯದ ಮೂಲಕ ನೀವು ನಮ್ಮ ಜೊತೆ ಆರ್ಥಿಕ ಸಹಾಯದಲ್ಲಿ ಪಾಲುಗಾರರಾಗಲು ನಿಮ್ಮನ್ನು ಸ್ವಾಗತಿಸುತ್ತೇವೆ. ನಮ್ಮ ದೇಶದಾದ್ಯಂತ ಮಾಡುವ ಸೇವಾಕಾರ್ಯಗಳಿಗಾಗಿ ನೀವು ಕಳಿಸುವಂತಹ ನಿಮ್ಮ ಮೊತ್ತವು ಬಹಳವಾಗಿ ಮೆಚುಟಗೆವುಳ್ಳದ್ದಾಗಿರುತ್ತದೆ.

ನಿಮ್ಮ ಆರ್ಥಿಕ ಸಹಾಯವನ್ನು ಚೆಕ್ ಮೂಲಕವಾಗಿ ಕಳುಹಿಸಬಹುದು/ನಮ್ಮ ಕಛೇರಿಯ ವಿಳಾಸವಾದ "ಆಲ್ ಪೀಪಲ್ಸ್ ಸಭೆ ಬೆಂಗಳೂರು" ಗೆ ಬ್ಯಾಂಕ್ ಡ್ರಾಫ್ಟ್ ಗಳನ್ನು ಕೊಡಬಹುದು ಅಥವಾ ನಮ್ಮ ಬ್ಯಾಂಕಿನ ಖಾತೆಯ ವಿವರಗಳನ್ನು ಉಪಯೋಗಿಸಿ ನೇರವಾಗಿ ಬ್ಯಾಂಕ್ ಮೂಲಕ ನಿಮ್ಮ ಕಾಣಿಕೆಗಳನ್ನು ವರ್ಗಾಹಿಸಬಹುದು

Account Name: All Peoples Church
Account Number: 0057213809,
IFSC Code: CITI0000004
Bank: Citibank N.A., 506-507,
Level 5, Prestige Meridian 2, # 30,
M.G. Road, Bangalore - 560 001

*ದಯವಿಟ್ಟು ಗಮನಿಸಿ: ಆಲ್ ಪೀಫಲ್ಸ್ ಸಭೆಯು FCRA ಅನುಮತಿ ಹೊಂದಿಲ್ಲ ಮತ್ತು ಭಾರತೀಯ ನಾಗರೀಕರಿಂದ ಮಾತ್ರ ಬ್ಯಾಂಕ್ ಕಾಣಿಕೆಗಳನ್ನು ಅಂಗೀಕರಿಸುತ್ತಿದ್ದೇವೆ. ನಿಮ್ಮ ಕಾಣಿಕೆಗಳನ್ನು ಕೊಡುವಾಗ, ಆಲ್ ಪೀಪಲ್ಸ್ ಸಭೆಯ ಯಾವ ಕ್ಷೇತ್ರದಲ್ಲಿ ನಿಮ್ಮ ಕಾಣಿಕೆಯು ಉಪಯೋಗಿಸಬೇಕೆಂಬುದಾಗಿ ನಿಮ್ಮ ಅಪೇಕ್ಷೆಯನ್ನು ತಿಳಿಯಪಡಿಸಬಹುದು.*

ದಯವಿಟ್ಟು ನಮಗಾಗಿ ಮತ್ತು ನಮ್ಮ ಸೇವೆಗಾಗಿ ಪ್ರಾರ್ಥಿಸಿರಿ! ಧನ್ಯವಾದಗಳು ಮತ್ತು ದೇವರು ನಿಮ್ಮನ್ನು ಆಶೀರ್ವದಿಸಲಿ!

# ಆಲ್ ಪೀಪಲ್ಸ್ ಚರ್ಚ್‌ನ ಪ್ರಕಟಣೆಗಳು

ಕೆಲಸದ ಕಡೆಗೆ ಸತ್ಯವೇದದ ನೋಟ
ನಿನ್ನ ಕರೆಯನ್ನು ಕಡೆಗಣಿಸದಿರು
ನಿರೀಕ್ಷೆಯನ್ನು ಕಳೆದುಕೊಳ್ಳಬೇಡ
ವಿಶ್ವಾಸಿಗಳನ್ನು ಸಜ್ಜುಗೊಳಿಸುವುದು
ವೈಯುಕ್ತಿಕ ಮತ್ತು ತಲೆಮಾರಿನ ಬಂಧನಗಳನ್ನು ಮುರಿಯುವುದು
ನಿಮ್ಮ ಸಭಾಪಾಲಕರಿಗೆ ಹೇಗೆ ಸಹಾಯ ಮಾಡುವುದು
ದೇವರ ರಾಜ್ಯ ಕಟ್ಟುವವರು
ಪರಲೋಕವೆಂದು ಕರೆಯಲ್ಪಡುವ ನಿಜ ಸ್ಥಳ
ದೇವರ ಉದ್ದೇಶಗಳಿಗೆ ಜನ್ಮ ಕೊಡುವುದು
ಬೇರುಗಳಿಗೆ ಕೊಡಲಿ ಹಾಕುವುದು
ನಿಮ್ಮ ಜೀವಿತಕ್ಕಿರುವ ದೇವರ ಉದ್ದೇಶವನ್ನು ನೆರವೇರಿಸುವುದು
ಉಜ್ಜೀವನದಲ್ಲಿ ಒಂದು ಸಭೆ
ದೇವರ ಪ್ರಸನ್ನತೆ
ಜ್ಞಾನ, ಪ್ರಕಟನೆ ಮತ್ತು ಬಲದ ಆತ್ಮನು
ದೇವರು ಒಳ್ಳೆಯ ದೇವರಾಗಿದ್ದಾನೆ
ಅಸ್ತಿವಾರಗಳು ಭಾಗ - 1
ತೆರೆದ ಪರಲೋಕಗಳು
ಜೀವನದ ರಾತ್ರಿಯ ಸಮಯಗಳು
ಪ್ರಾಮಾಣಿಕತೆ
ನಾವು ಕ್ರಿಸ್ತನಲ್ಲಿ ಯಾರಾಗಿದ್ದೇವೆ
ಪರಿವರ್ತನೆ
ಗೌರವದ ಸಂಕೇತ

**ಉಚಿತ ಇ-ಪುಸ್ತಕಗಳು**

ನಮ್ಮ ಚರ್ಚ್ ವೆಬ್ ಸೈಟ್‌ನಿಂದ ನಮ್ಮ ಎಲ್ಲಾ ಪುಸ್ತಕಗಳ ಪಿ ಡಿ ಎಫ್ ಅನುವಾದವನ್ನು ಉಚಿತವಾಗಿ ಸಂಗ್ರಹಿಸಲು ದೊರೆಯುತ್ತವೆ. ಇತರೆ ಪ್ರಾದೇಶಿಕ ಭಾಷೆಗಳಲ್ಲೂ ಸಹ ಈ ಪುಸ್ತಕಗಳು ದೊರೆಯುತ್ತದೆ. ಇಂತಹ ಉಚಿತ ಪುಸ್ತಕಗಳಿಗಾಗಿ ಇ-ಮೇಲ್ ಅಥವಾ ಅಂಚೆಯ ಮೂಲಕವಾಗಿ ನಮ್ಮನ್ನು ಸಂಪರ್ಕಿಸಬಹುದಾಗಿದೆ.

**ಉಚಿತ ಆಡಿಯೋ ಮತ್ತು ವೀಡಿಯೊ ಸಂದೇಶಗಳು**

'ಲಿವಿಂಗ್ ಸ್ಪ್ರಾಂಗ್ ಎಂಬ ಗಾಡ್ ಟವಿಯ ಕಾರ್ಯಕ್ರಮದ ಮತ್ತು ಸಮಾವೇಶಗಳ ವಿಡಿಯೋ ರೆಕಾರ್ಡಿಂಗ್ ಗಳಿಗಾಗಿ ಮತ್ತು ನಮ್ಮ ಭಾನುವಾರದ ಸಂದೇಶಗಳ ಆಡಿಯೋ ರೆಕಾರ್ಡಿಂಗ್ (MP3)ಗಳಿಗಾಗಿ ನಮ್ಮ ವೆಬ್ ಸೈಟ್‌ನ್ನು ಸಂಪರ್ಕಿಸಿ.

# ಸತ್ಯವೇದ ಶಾಲೆ

ಮತ್ತು ಸೇವಾತರಬೇತಿಕೇಂದ್ರ

ಆಲ್ ಪೀಪಲ್ಸ್ ಸಭೆ - ಮತ್ತು ಸೇವಾತರಬೇತಿ ಕೇಂದ್ರ (A P C - BC & MTC) 2005 ರ ಆಗಸ್ಟ್ ತಿಂಗಳಲ್ಲಿ ಸ್ಥಾಪಿತವಾಯಿತು. ಇಲ್ಲಿ ಪುರುಷರು ಮತ್ತು ಸ್ತ್ರೀಯರನ್ನು ಸೇವೆಗಾಗಿ ಸಿದ್ಧಗೊಳಿಸಿ, ತರಬೇತಿಗೊಳಿಸಿ, ನಂಬಿಗಸ್ಥರಾದವರನ್ನು ಭಾರತದೇಶಕ್ಕೂ ಇತರದೇಶಗಳಿಗೂ - ಹಳ್ಳಿ, ಪಟ್ಟಣ, ನಗರ ಮತ್ತು ರಾಷ್ಟ್ರಗಳನ್ನು ಯೇಸುಕ್ರಿಸ್ತನಿಗಾಗಿ ಗೆಲ್ಲಲು ತರಬೇತಿಗೊಳಿಸುತ್ತೇವೆ.

**ಎ.ಪಿ.ಸಿ - ಬಿ.ಸಿ. / ಎಂ.ಟಿ.ಸಿ. - 2 ಪರಿವಿಡಿಗಳನ್ನು ನೀಡುತ್ತದೆ.**

- ಶೈಕ್ಷಣಿಕ ಪರಿಣಿತಿಯೊಡನೆ ಆತ್ಮಿಕ ಮತ್ತು ಪ್ರಾಯೋಗಿಕ ಸೇವಾತರಬೇತಿಯನ್ನು ಒದಗಿಸುವುದಕ್ಕಾಗಿ ಪೂರ್ಣಾವಧಿ ವಿದ್ಯಾರ್ಥಿಗಳಿಗಾಗಿ 2 ವರ್ಷಗಳ ಸತ್ಯವೇದ ಶಾಲೆಯ ಶಿಕ್ಷಣ ಪರಿವಿಡಿ. 2 ವರ್ಷಗಳ ಪರಿವಿಡಿಗಳನ್ನು ಮುಗಿಸಿದ ವಿದ್ಯಾರ್ಥಿಗಳು **ಡಿಪ್ಲೋಮಾ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ** (Dip.Th/Cm) ಪಡೆದುಕೊಳ್ಳುತ್ತಾರೆ. ತರಗತಿಗಳು ಆಂಗ್ಲಭಾಷೆಯಲ್ಲಿ ನಡೆಸಲ್ಪಡುತ್ತವೆ. ನಮ್ಮ ಬೋಧನಾ ವಿಭಾಗವು ತರಬೇತಿಹೊಂದಿದ ಮತ್ತು ದೇವರ ವಾಕ್ಯದ ಅಭಿಷೇಕ ಹೊಂದಿದ ಶಿಕ್ಷಕರನ್ನು ಒಳಗೊಂಡಿದೆ. ಎಲ್ಲಾ ಬೋಧಕರು ಹಾಗೂ ವಿದ್ಯಾರ್ಥಿಗಳು ಎ.ಪಿ.ಸಿ ಯ ಅಧ್ಯಯನ ಕೇಂದ್ರ ಮತ್ತು ಗ್ರಂಥಾಲಯವನ್ನು (Sc & L) ಉಪಯೋಗಿಸಬಹುದಾಗಿದೆ.

- ಪ್ರಾಯೋಗಿಕ ತರಬೇತಿ ಹೊಂದಲು ಅಪೇಕ್ಷಿಸುವ ನಮ್ಮ ಸತ್ಯವೇದ ಶಾಲೆಯ ಪಧವೀದರರಿಗೆ ಪ್ರಾಯೋಗಿಕ ಸೇವಾ ತರಬೇತಿ ನೀಡುತ್ತೇವೆ. ಒಂದು ಅಥವಾ ಹೆಚ್ಚಿನ ವರ್ಷಗಳನ್ನು ಮುಗಿಸಿದವರು **ಪ್ರಾಯೋಗಿಕ ಸೇವಾ ಪ್ರಮಾಣಪತ್ರ** ಪಡೆದುಕೊಳ್ಳುತ್ತಾರೆ ಮತ್ತು ತೊಡಗಿಸಿಕೊಂಡ ಅವಧಿಯು ಸ್ಪಷ್ಟವಾಗಿ ನಮೂದಿಸಲ್ಪಡುತ್ತದೆ.

ಹೆಚ್ಚಿನ ಮಾಹಿತಿಗಳಿಗಾಗಿ www.apcwo.org/biblecollege ನ್ನು ಸಂಪರ್ಕಿಸಿ.

# ಆಲ್ ಪೀಪಲ್ಸ್ ಸಭೆಯ ಬಗ್ಗೆ

ನಮ್ಮ ಬೆಂಗಳೂರು ನಗರದಲ್ಲಿ ಉಪ್ಪು ಮತ್ತು ಬೆಳಕು ಆಗಿರಬೇಕೆಂದು ಮತ್ತು ಭಾರತ, ಪ್ರಪಂಚದ ಎಲ್ಲಾ ರಾಷ್ಟ್ರಗಳಿಗೂ ಧ್ವನಿ ಆಗಿರಬೇಕೆಂಬುದು ಆಲ್ ಪೀಪಲ್ಸ್ ಸಭೆಯ ದರ್ಶನವಾಗಿದೆ.

ನಾವು, ಆತನ ಪವಿತ್ರಾತ್ಮನ ಪ್ರಮಾಣಿಕರಣ ಮತ್ತು ರಾಜಿ ಹೊಂದದ, ಅಭಿಷೇಕಹೊಂದಿದ ದೇವರ ವಾಕ್ಯವನ್ನು ಪರಿಪೂರ್ಣವಾಗಿ ಪ್ರಸ್ತುತ ಪಡಿಸುವ ಬದ್ಧತೆ ಹೊಂದಿದ್ದೇವೆ. ನಾವು ಒಳ್ಳೆಯ ಸಂಗೀತ, ಸೃಜನಾತ್ಮಕ ಪ್ರಸ್ತುತಿ, ಪ್ರತಿಭಾವಂತ ಸಮರ್ಥನೆಗಳು, ಸಮಕಾಲೀನ ಸೇವಾ ತಂತ್ರಗಳು, ಇತ್ತೀಚಿನ ತಂತ್ರಜ್ಞಾನ ಮುಂತಾದವುಗಳು, ದೈವದತ್ತ ವಿಧಾನಹೊಂದಿದ ದೇವರ ವಾಕ್ಯವನ್ನು ಪವಿತ್ರಾತ್ಮನ ಸೂಚಕಕಾರ್ಯ, ಅಧ್ಭುತಕಾರ್ಯ, ಮಹತ್ಕಾರ್ಯ ಮತ್ತು ಪವಿತ್ರಾತ್ಮನ ವರದಲ್ಲಿ ಸಾರುವುದನ್ನು ಬದಲಿಸಲು ಸಾಧ್ಯವಿಲ್ಲವೆಂದು ನಂಬುತ್ತೇವೆ. (1 ಕೊರಿಂಥದವರಿಗೆ 2: 4,5, ಇಬ್ರಿಯರಿಗೆ 2: 3,4.) ಯೇಸು ನಮ್ಮ ಉದ್ದೇಶ, ದೇವರ ವಾಕ್ಯ ನಮ್ಮ ವಿಷಯ, ಪವಿತ್ರಾತ್ಮನ ಬಲ ನಮ್ಮ ಕ್ರಮ, ಜನರು ನಮ್ಮ ಅನುರಾಗ, ಕ್ರಿಸ್ತನ ಮಾದರಿಯ ಪ್ರೌಢತೆ ನಮ್ಮ ಗುರಿಯಾಗಿದೆ.

ಬೆಂಗಳೂರನ್ನು ಪ್ರಮುಖವಾಗಿಟ್ಟುಕೊಂಡು, ಹೊಸ ಸಭೆಗಳು ನಿಯತಕಾಲಿಕವಾಗಿ ಭಾರತದಾದ್ಯಂತ ಸ್ಥಾಪಿಸಲ್ಪಡುತ್ತಿವೆ. ಪ್ರಸಕ್ತವಾದ ಪಟ್ಟಿಯನ್ನು ಪಡೆಯಲು ಮತ್ತು ಆಲ್ ಪೀಪ್ಲ್ಸ್ ಸಭೆಯ ಸ್ಥಳಗಳ ಬಗ್ಗೆ ಮಾಹಿತಿಗಳನ್ನು ಪಡೆದುಕೊಳ್ಳಲು, ನಮ್ಮ ವೆಬ್ ಸೈಟ್‌ನ್ನು ಸಂಪರ್ಕಿಸಿರಿ. www.apcwo.org ಅಥವಾ contact@apcwo.org ಗೆ ಇ-ಮೇಲ್ ಕಳುಹಿಸಿರಿ.

# ನಿಮ್ಮನ್ನು ಪ್ರೀತಿಸುವ ದೇವರನ್ನು ನೀವು ತಿಳಿದಿದ್ದಿರೋ?

ಸುಮಾರು ಎರಡು ಸಾವಿರ ವರ್ಷಗಳ ಹಿಂದೆ, ದೇವರು ಮನುಷ್ಯನಾಗಿ ಭೂಲೋಕಕ್ಕೆ ಬಂದನು. ಆತನ ಹೆಸರು ಯೇಸು.

ಆತನು ಪಾಪರಹಿತ ಜೀವನ ನಡಿಸಿದನು. ಯೇಸುವು ಶರೀರಧಾರಿಯಾದ ದೇವರಾಗಿದ್ದದರಿಂದ ಆತನು ಹೇಳಿದ್ದರಲ್ಲಿ, ಮಾಡಿದ್ದರಲ್ಲಿ ದೇವರನ್ನು ನಮಗೆ ಪ್ರಚುರಪಡಿಸಿದ್ದಾನೆ. ಆತನು ಆಡಿದ ಮಾತುಗಳು ಸ್ವತಃ ದೇವರ ಮಾತುಗಳೇ ಆಗಿದ್ದವು. ಆತನು ಮಾಡಿದ ಎಲ್ಲಾ ಕಾರ್ಯಗಳು ದೇವರ ಕಾರ್ಯಗಳೇ - ಯೇಸು ಭೂಲೋಕದಲ್ಲಿ ಅನೇಕ ಅದ್ಭುತ ಕಾರ್ಯಗಳನ್ನು ಮಾಡಿದನು. ರೋಗಗಳಲ್ಲಿ ನರಳುತ್ತಿದ್ದವರನ್ನು ಆತನು ಗುಣಪಡಿಸಿದನು. ಕುರುಡರಿಗೆ ಕಣ್ಣುಕೊಟ್ಟನು. ಕಿವುಡರನ್ನು ಮುಟ್ಟಿ ಕಿವಿಕೇಳುವಂತೆ ಮಾಡಿದನು. ಕುಂಟರನ್ನು ನಡೆದಾಡುವಂತೆ ಮಾಡಿದನು. ಎಲ್ಲಾ ಬಗೆಯ ರೋಗಗಳನ್ನು ವಾಸಿಮಾಡಿದನು. ಹಸಿದ ಜನರಿಗೆ ಐದುರೊಟ್ಟಿ, ಎರಡು ಮೀನುಗಳಿಂದ ಉಣ್ಣಲು ಬಡಿಸಿದನು. ಸಮುದ್ರದ ಮೇಲೆ ನಡೆದನು, ಸಮುದ್ರದ ಬಿರುಗಾಳಿಯನ್ನು ಶಾಂತಗೊಳಿಸಿದನು. ಇನ್ನು ಅನೇಕ ಮಹತ್ಕಾರ್ಯಗಳನ್ನು ಮಾಡಿದನು.

**ಈ ಎಲ್ಲಾ ಅದ್ಭುತ ಕಾರ್ಯಗಳು ನಮಗೆ ದೇವರು, ಒಳ್ಳೆಯ ದೇವರು, ಆತನು ಜನರೆಲ್ಲರೂ, ಆರೋಗ್ಯದಿಂದಲೂ, ಸಂತೋಷದಿಂದಲೂ ಕ್ಷೇಮದಿಂದಲೂ ಇರಬೇಕೆಂದು ಬಯಸುತ್ತಾನೆ. ದೇವರು, ಜನರ ಎಲ್ಲಾ ಕೊರತೆಗಳನ್ನು ಪೂರೈಸುತ್ತಾನೆ ಮತ್ತು ನೀಗಿಸುತ್ತಾನೆ ಎಂದು ಪ್ರಕಟಿಸುತ್ತವೆ.**

ಆದುದರಿಂದ ದೇವರು ಯಾಕೆ ಮನುಷ್ಯನಾಗಿ ಈ ಲೋಕಕ್ಕೆ ಬರಲು ತೀರ್ಮಾನಿಸಿದನು? ಯೇಸುವು ಯಾಕೆ ಬಂದನು?

ನಾವೆಲ್ಲರೂ ಪಾಪ ಮಾಡಿದ್ದೇವೆ. ದೇವರ ದೃಷ್ಟಿಯಲ್ಲಿ ಅಂಗೀಕಾರವಾಗದ ಅನೇಕ ಕಾರ್ಯಗಳನ್ನು ಮಾಡಿದ್ದೇವೆ. ಪಾಪವು, ಅದರ ಕಾರ್ಯಫಲವನ್ನು ಹೊಂದಿದೆ. ಪಾಪವು ದೇವರಿಗೂ, ನಮಗೂ ನಡುವೆಯಿರುವ ಕದಲಿಸಲಾಗದ ಅಡ್ಡ ಗೋಡೆಯಾಗಿದೆ. ಪಾಪವು ನಮ್ಮನ್ನು ದೇವರಿಂದ ಬೇರ್ಪಡಿಸುತ್ತದೆ. ನಮ್ಮನ್ನು ಸೃಷ್ಟಿಸಿದ ದೇವರನ್ನು ತಿಳಿಯಲು ಮತ್ತು ಅರ್ಥಭರಿತ ಸಂಬಂಧವನ್ನು ಆತನೊಂದಿಗೆ ಹೊಂದಿಕೊಳ್ಳುವುದನ್ನು ಪಾಪವು ತಡೆದು ಹಿಡಿಯುತ್ತದೆ. ಆದುದರಿಂದ ನಮ್ಮಲ್ಲಿ ಅನೇಕರು ನಿರರ್ಥಕವಾದ ಬೇರೆ ವಿಷಯಗಳಿಂದ ಈ ಶೂನ್ಯವನ್ನು ತುಂಬಿಸಲು ಪ್ರಯತ್ನಿಸುತ್ತೇವೆ.

ನಮ್ಮ ಪಾಪದ ಮತ್ತೊಂದು ಫಲವೇನೆಂದರೆ ನಮ್ಮನ್ನು ದೇವರಿಂದ ನಿತ್ಯಕ್ಕೂ ಬೇರ್ಪಡಿಸುತ್ತದೆ. ದೇವರ ನ್ಯಾಯಸ್ಥಾನದಲ್ಲಿ ಪಾಪದ ಶಿಕ್ಷೆ ಮರಣವಾಗಿದೆ. ಮರಣವು ನಮ್ಮನ್ನು ನರಕದಲ್ಲಿ ದೇವರಿಂದ ಶಾಶ್ವತವಾಗಿ ಅಗಲಿಕೆಗೊಳಿಸುತ್ತದೆ. ಅಥವಾ ದೂರಸರಿಯುವಂತೆ ಮಾಡುತ್ತದೆ.

ಆದರೆ ನಮಗಿರುವ ಶುಭ ಸಮಾಚಾರವೇನೆಂದರೆ ನಾವು ಪಾಪಗಳಿಂದ ಸ್ವತಂತ್ರರಾಗಬಹುದು ಮತ್ತು ದೇವರೊಂದಿಗೆ ನವೀಕೃತಗೊಳ್ಳಬಹುದು. ಸತ್ಯವೇದವು ''ಪಾಪವು ಕೊಡುವ ಸಂಬಳ ಮರಣ, ದೇವರ ಉಚಿತಾರ್ಥವರವು ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿರುವ ನಿತ್ಯಜೀವ'' ಎಂದು ಹೇಳುತ್ತದೆ (ರೋಮಪುರ 6:23) ಯೇಸು ಪ್ರಪಂಚದ ಪಾಪಗಳಿಗೆ, ಶಿಲುಬೆಯ ಮೇಲೆ ಪ್ರಾಣಕೊಡುವ ಮೂಲಕ ಪಾಪದ ವಶದಿಂದ ಎಲ್ಲರನ್ನು ಬಿಡುಗಡೆಮಾಡಿದ್ದಾನೆ. ಮೂರನೇ ದಿನದಲ್ಲಿ ಎದ್ದು ಬಂದಿದ್ದಾನೆ. ಜೀವಿಸುವವನಾಗಿ ಅನೇಕರಿಗೆ ಕಾಣಿಸಿಕೊಂಡನು. ಮತ್ತು ಪರಲೋಕಕ್ಕೆ ಏರಿ ಹೋದನು.

ದೇವರು, ಕರುಣೆ, ಪ್ರೀತಿಯುಳ್ಳ ದೇವರು. ಯಾವನಾದರೂ ನರಕದಲ್ಲಿರಬೇಕೆಂದು ಆತನು ಬಯಸುವ ದೇವರಲ್ಲ ಆತನು, ಇಡೀ ಮನುಷ್ಯ ಕುಲವು ಪಾಪದ ಬಂಧನದಿಂದ ಸ್ವತಂತ್ರಗೊಳ್ಳಲು, ಪಾಪದ ಶಾಶ್ವತ ದೋಷ ಫಲಗಳಿಂದ ಬಿಡುಗಡೆ ಹೊಂದುವಂತೆ, ಮಾರ್ಗ ಮಾಡಿಕೊಡಲು ಬಂದನು. ಆತನು ಪಾಪಿಗಳನ್ನು ರಕ್ಷಿಸಲು ಬಂದನು. ನನ್ನಂತೆಯೇ, ನಿಮ್ಮಂತೆಯೇ, ಜನರನ್ನು ಪಾಪದಿಂದ, ನಿತ್ಯತ್ವದ ಮರಣದಿಂದ ಬಿಡುಗಡೆ ಮಾಡಲು ಬಂದನು.

ಈ ಉಚಿತವಾದ ಪಾಪಗಳ ಕ್ಷಮಾಪಣೆಯನ್ನು ಪಡೆಯಬೇಕಾದರೆ ನಾವು ಒಂದೇ ಒಂದು ವಿಷಯವನ್ನು ಮಾಡಬೇಕೆಂದು ಸತ್ಯವೇದ ಹೇಳುತ್ತದೆ. ನೀನು ಯೇಸುಕ್ರಿಸ್ತನು ಶಿಲುಬೆಯ ಮೇಲೆ ಮಾಡಿದ್ದೆಲ್ಲವನ್ನು ಅಂಗೀಕರಿಸಿಕೊಳ್ಳಬೇಕು. ಮತ್ತು ಸಂಪೂರ್ಣ, ಯಥಾರ್ಥ ಹೃದಯದಿಂದ ಯೇಸುವನ್ನು ನಂಬಬೇಕು.

''**ಆತನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬನು ಆತನ ಹೆಸರಿನ ಮೂಲಕವಾಗಿ ಪಾಪ ಪರಿಹಾರವನ್ನು ಹೊಂದುವನು**'' (ಅಪೊಸ್ತಲರ ಕೃತ್ಯ 10:43)

''**ನೀನು ಯೇಸುವನ್ನೇ ಕರ್ತನೆಂದು ಬಾಯಿಂದ ಅರಿಕೆಮಾಡಿಕೊಂಡು ದೇವರು ಆತನನ್ನು ಸತ್ತವರೊಳಗೆ ಎಬ್ಬಿಸಿದನೆಂದು ಹೃದಯದಿಂದ ನಂಬಿದರೆ ನಿನಗೆ ರಕ್ಷಣೆಯಾಗುವದು ಎಂಬುದೇ**'' (ರೋಮಾಪುರದವರಿಗೆ 10:9)

ನೀವು ಸಹ ಯೇಸುಕ್ರಿಸ್ತನನ್ನು ನಂಬಿದರೆ ನಿಮ್ಮ ಪಾಪಗಳಿಗೆ ಕ್ಷಮಾಪಣೆಯನ್ನು ಮತ್ತು ಪರಿಹಾರಗಳನ್ನು ಹೊಂದಿಕೊಳ್ಳಬಹುದು. ಯೇಸುವಿನ ಮೇಲೆ ನಂಬಿಕೆಯಿಡಲು, ಮತ್ತು ಆತನು ನಿಮಗೋಸ್ಕರ ಶಿಲುಬೆಯ ಮೇಲೆ ಮಾಡಿದ ಕಾರ್ಯಗಳಲ್ಲಿ ನಂಬಿಕೆಯಿಟ್ಟು ತೀರ್ಮಾನ ತೆಗೆದುಕೊಳ್ಳಲು ಈ ಮುಂದಿನ ಪ್ರಾರ್ಥನೆಯು ಸಹಾಯ ಮಾಡುವುದು. ಯೇಸು ಕ್ರಿಸ್ತನು ನಿಮಗಾಗಿ ಏನು ಮಾಡಿದನೆಂದೂ ಮತ್ತು ನಿಮ್ಮ ಪಾಪಗಳ ಕ್ಷಮಾಪಣೆ ಮತ್ತು ಶುದ್ಧೀಕರಣವನ್ನು ಹೊಂದಿಕೊಳ್ಳುವಂತೆಯೂ ಮತ್ತು ನಿಮ್ಮ ಅಂಗೀಕಾರವನ್ನು ತೋರಿಸುವಂತೆಯೂ ಸಹಾಯ ಮಾಡುತ್ತದೆ. ಈ ಪ್ರಾರ್ಥನೆ ಬರೀ ಮಾರ್ಗದರ್ಶಿಯಾಗಿದೆ. ನಿಮ್ಮ ಸ್ವಂತ ಮಾತುಗಳಲ್ಲಿ ಪ್ರಾರ್ಥಿಸಬಹುದು.

*ಪ್ರಿಯ ಕರ್ತನಾದ ಯೇಸುವೇ, ಇಂದು ನೀನು ನನಗಾಗಿ ಶಿಲುಬೆ ಮೇಲೆ ಮಾಡಿದ್ದನ್ನು ಅರ್ಥ ಮಾಡಿಕೊಂಡಿದ್ದೇನೆ. ನೀನು ನನಗಾಗಿ ಪ್ರಾಣ ಕೊಟ್ಟೆ. ನನಗಾಗಿ ನಿನ್ನ ಪವಿತ್ರವಾದ ರಕ್ತ ಸುರಿಸುವ ಮೂಲಕ ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದಿ, ಇದರಿಂದ ನಾನು ಕ್ಷಮಿಸಲ್ಪಟ್ಟೆನು. ಯಾರ್‍ಯಾರು ಆತನ ಮೇಲೆ ನಂಬಿಕೆಯಿಟ್ಟರೊ, ಅವರು ಪಾಪಗಳ ಕ್ಷಮಾಪಣೆ ಹೊಂದಿದರು ಎಂದು ಸತ್ಯವೇದವು ನನಗೆ ತಿಳಿಸುತ್ತದೆ.*

*ಈ ದಿನ ನಾನು ನಿನ್ನನ್ನು ನಂಬುತ್ತೇನೆ. ನೀನು ನನಗಾಗಿ ಸಾಯುವುದರ ಮೂಲಕವೂ, ಮೂರನೇ ದಿನದಲ್ಲಿ ಜೀವಿತನಾಗಿ ಎದ್ದು ಬಂದದ್ದರ ಮೂಲಕವೂ ನೀನು ಮಾಡಿದ್ದನ್ನು ಅಂಗೀಕರಿಸಿಕೊಳ್ಳುತ್ತೇನೆ. ನನ್ನ ಒಳ್ಳೆಯ ಕೆಲಸಗಳಿಂದಲೂ, ಬೇರೊಬ್ಬನಿಂದಲೂ ನನ್ನನು ರಕ್ಷಿಸಿಕೊಳ್ಳಲು ಆಗುವುದಿಲ್ಲ. ನಾನು ನನ್ನ ಪಾಪಗಳ ಕ್ಷಮಾಪಣೆ ಸಂಪಾದಿಸಲು ಸಾಧ್ಯವಿಲ್ಲ.*

*ಈ ದಿನ ನಾನು ನನ್ನ ಹೃದಯದಿಂದ ನಂಬಿ ನನ್ನ ಬಾಯಿಂದ, ''ನೀನು ನನಗಾಗಿ ಸತ್ತೇ, ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದ್ದಿ. ಮರಣದಿಂದ ಜೀವಿತನಾಗಿ ಎದ್ದು ಬಂದಿದ್ದಿ ಎಂಬ ನಿನ್ನಲ್ಲಿ ಇಟ್ಟ ನಂಬಿಕೆಯಿಂದ, ನನ್ನ ಪಾಪಗಳ ಕ್ಷಮಾಪಣೆ, ಶುದ್ಧೀಕರಣ ಪಡೆದುಕೊಂಡೆ'' ಎಂದು ಹೇಳುತ್ತೇನೆ.*

*ಯೇಸುವೇ ನಿನಗೆ ವಂದನೆಗಳು. ನಿನ್ನನ್ನು ಪ್ರೀತಿಸಲು ಸಹಾಯ ಮಾಡು. ನಿನ್ನನ್ನು ಇನ್ನೂ ತಿಳಿಯಲು ಮತ್ತು ನಿನಗೆ ನಂಬಿಗಸ್ತನಾಗಿರಲು ಸಹಾಯಮಾಡು. ಆಮೇನ್*

ನಮ್ಮ ಕ್ರೈಸ್ತ ಜೀವನವು ಪಾಪ ಮತ್ತು ಸೈತಾನನಿಂದ ಜೀವಸ್ವರೂಪನಾದ ದೇವರ ಕಡೆಗೆ ಹೃದಯ ಮತ್ತು ಮನಸ್ಸಿನ ಪರಿವರ್ತನೆಯಾಗುವ ಅವಶ್ಯಕ ಅಂಶವಾಗಿರುವ ಪಶ್ಚಾತ್ತಾಪದಿಂದ ಪ್ರಾರಂಭವಾಯಿತು. ಆ ಕ್ಷಣದಲ್ಲಿಯೇ ದೇವರು ನಮ್ಮನ್ನು ಅಂತರ್ಯದಲ್ಲಿ ಪರಿವರ್ತನೆ ಮಾಡಿದನು. ನಾವು ಹೊಸದಾಗಿ ಹುಟ್ಟಿದೆವು! ನಾವು ಕ್ರಿಸ್ತನಲ್ಲಿ ನೂತನ ಸೃಷ್ಟಿಯಾದೆವು. ಒಂದು ಕ್ಷಣದಲ್ಲಿ, ದೇವರು ನಮ್ಮ ಆತ್ಮಗಳಲ್ಲಿ ನಮ್ಮನ್ನು ಕತ್ತಲೆಯಿಂದ ಬೆಳಕಿಗೂ, ಸೈತಾನನ ಬಂಧನದಿಂದ ಕ್ರಿಸ್ತನಲ್ಲಿ ಸ್ವಾತಂತ್ರ್ಯಕ್ಕೂ ತಂದ ಒಂದು ಸೃಷ್ಟಿಯ ಕಾರ್ಯವನ್ನು ಮಾಡಿದನು. ಕ್ರಿಸ್ತನಲ್ಲಿಯ ನಮ್ಮ ಜೀವನವು ಒಂದು ಕ್ಷಣದ ಪರಿವರ್ತನೆಯಲ್ಲಿ ಪ್ರಾರಂಭವಾಗಿ ಇನ್ನೊಂದು ಕ್ಷಣದ ಪರಿವರ್ತನೆಯ ಘಟನೆಯಲ್ಲಿ ತುತ್ತ ತುದಿಗೇರುತ್ತದೆ. ಆದಾಗ್ಯೂ ಇವೆರಡರ ಮಧ್ಯದಲ್ಲಿ ಪರಿವರ್ತನೆಯು ಮುಂದುವರಿಯುತ್ತಿರುವ ಒಂದು ಕಾರ್ಯಗತಿಯಿದೆ. ಸತತವಾಗಿ ಮುಂದುವರಿಯುವ ಪರಿವರ್ತನೆಯ ಈ ಕಾರ್ಯಗತಿಯಲ್ಲಿ ನಾವು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮೊಟ್ಟ ಮೊದಲು ನಮ್ಮನ್ನು ಪ್ರೇರಿಸಿ ಮೇಲೆಬ್ಬಿಸುವ ಉದ್ದೇಶ ವಿಷಯವನ್ನು ಈ ಪುಸ್ತಕವು ಹೇಳುತ್ತದೆ.

ಆಶಿಷ್ ರಾಯ್‌ಚೂರ್

**All Peoples Church & World Outreach**
# 319, 2nd Floor, 7th Main, HRBR Layout,
2nd Block, Kalyan Nagar, Bangalore 560 043
Karnataka, INDIA

Phone: +91-80-25452617, +91-80-65970617
Email: contact@apcwo.org
Website: www.apcwo.org